ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION



ಮಾಸಪತ್ರಿಕೆ
ಸಂಪುಟ 3, ಸಂಚಿಕೆ 2, ಡಿಸೆಂಬರ್ 2024
SHRIDEVI ANTARANGA
Monthly Magazine

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ | ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ | ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



**ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಎಲ್ಲರಿಗೂ ನಾನು, ನನಗಾಗಿ ಎಲ್ಲರೂ...




ಭಾರತದಲ್ಲಿ ಕಳೆದ ಶತಮಾನದಲ್ಲಿ ಎರಡು ಪ್ರಮುಖ ಘಟನೆಗಳನ್ನು ಸದಾ ಉಲ್ಲೇಖಿಸಲಾಗುತ್ತದೆ. ಮೊದಲನೆಯದು ಭಾರತದ ಸ್ವಾತಂತ್ರ್ಯ ಹೋರಾಟ. ಎರಡನೆಯದು ಭಾರತದ ಜನಜೀವನದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಹುಟ್ಟಿಕೊಂಡ ಸಹಕಾರ ಚಳವಳಿ. ಈ ಎರಡು ಘಟನೆಗಳು ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಜರುಗಿದ್ದವು ಎನ್ನುವುದು ಮುಖ್ಯವಾದ ಸಂಗತಿ.

ಭಾರತದ ಸ್ವಾತಂತ್ರ್ಯ ಹೋರಾಟವು ಅನೇಕ ದೇಶಗಳಿಗೆ ಇಂದಿಗೂ ಪ್ರೇರಣೆಯನ್ನು ಕೊಡುತ್ತಿದೆ. ಅದೇರೀತಿ ಸಹಕಾರ ಚಳವಳಿಯ ಫಲವನ್ನು ದೇಶದ ಬಹುಪಾಲು ಜನರು ಪಡೆಯುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ಅನೇಕದೊಡ್ಡ ರಾಷ್ಟ್ರಗಳು ಆರ್ಥಿಕ ಅಸಮಾನತೆಯಿಂದ ಬೇಯುತ್ತಿದ್ದರೆ ಸಹಕಾರ ಚಳವಳಿಯಿಂದ ಭಾರತದಲ್ಲಿ ಆರ್ಥಿಕ ಅಸಮಾನತೆ ಸಣ್ಣ ಪ್ರಮಾಣದಲ್ಲಿಯಾದರೂ ಕಡಿಮೆಯಾಗಿದೆ ಎನ್ನುವುದು ಸಮಾಧಾನದ ವಿಚಾರ. ಕರ್ನಾಟಕದಲ್ಲಿ ಅನ್ನಭಾಗ್ಯ ಯೋಜನೆ ಯಶಸ್ವಿಯಾಗಿ ಅನುಷ್ಠಾನವಾಗಿದ್ದರೆ ಅದಕ್ಕೆ ಸಹಕಾರ ಚಳವಳಿಯೇ ಪ್ರೇರಕವಾಗಿದೆ. ಪ್ರಾರಂಭದಲ್ಲಿ ಸಾರ್ವಜನಿಕ ಆಹಾರ ವಿತರಣೆಯ ಹೊಣೆಯನ್ನು ಹೊತ್ತಿದ್ದ ಸೊಸೈಟಿಗಳು ಈ ಯೋಜನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಆಹಾರ ಧಾನ್ಯಗಳನ್ನು ವಿತರಿಸುತ್ತಿವೆ. ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ 45,920 ಸಹಕಾರ ಸಂಘಗಳಿವೆ. ಸುಮಾರು 2.19ಲಕ್ಷ ಜನ ಇದರಲ್ಲಿ ಸದಸ್ಯರಾಗಿದ್ದಾರೆ. ಇವರಲ್ಲಿ ಶೇಕಡ 40ಕ್ಕೂ ಹೆಚ್ಚು ಸದಸ್ಯರಿಂದ ಠೇವಣಿ ಸಂಗ್ರಹಿಸಲಾಗಿದೆ. ಕರ್ನಾಟಕದಲ್ಲಿ ಹಲವಾರು ಮುಖ್ಯ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳಿರುವುದನ್ನು ನಾವು ಗಮನಿಸಬಹುದು. 3651 ನೀರು ಬಳಕೆದಾರರ ಸಹಕಾರ ಸಂಘಗಳು ಇವೆ. ಅದೇ ರೀತಿ 6361 ಮಹಿಳಾ ಸಹಕಾರಸಂಘಗಳು, 3 ಗ್ರಾಮೀಣ ವಿದ್ಯುತ್ ಪ್ರಸರಣ ಸಹಕಾರ ಸಂಘಗಳು, 15 ಸಾರಿಗೆ ಸಹಕಾರ ಸಂಘಗಳು, ಮತ್ತು 822 ಮೀನುಗಾರಿಕಾ ಸಹಕಾರ ಸಂಘಗಳು ಸಕ್ರಿಯವಾಗಿವೆ. ಇವು ಅಪರೂಪದ ಸಹಕಾರಿಕ್ಷೇತ್ರದ ಸಂಸ್ಥೆಗಳು. ಇನ್ನು ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಮಂಡಲ ಕರ್ನಾಟಕರಾಜ್ಯದ ಹೆಮ್ಮೆಯ ಸಹಕಾರ ಸಂಸ್ಥೆಯಾಗಿದೆ. ರಾಜ್ಯದಲ್ಲಿ 21 ಜಿಲ್ಲಾ ಸಹಕಾರ ಬ್ಯಾಂಕುಗಳಿವೆ. ಇವು 6040 ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲವನ್ನು ವಿತರಣೆ ಮಾಡುತ್ತಿವೆ.

▶▶ 2ನೇ ಪುಟಕ್ಕೆ...

# ಬೆಂಗಳೂರಿನ ಟೆಕ್ ಮೇಳದಲ್ಲಿ ತಾಂತ್ರಿಕ ಮಾಯೆ!



■ ಬಿ.ಎಸ್. ವೆಂಕಟೇಶ ಪ್ರಸಾದ್
ಹಿರಿಯ ಪತ್ರಕರ್ತರು

ಕರ್ನಾಟಕ ಸರ್ಕಾರವು ಪ್ರತಿವರ್ಷ ಆಯೋಜಿಸುವ ಪ್ರತಿಷ್ಠಿತ “ಬೆಂಗಳೂರು ಟೆಕ್ ಶೃಂಗ”ದ 2024ನೇ ಸಾಲಿನ ಕಾರ್ಯಕ್ರಮ ನವೆಂಬರ್ 19ರಿಂದ 21ರವರೆಗೆ ಯಶಸ್ವಿಯಾಗಿ ನಡೆಯಿತು. ರಾಜಧಾನಿಯಅರಮನೆ ಮೈದಾನದಲ್ಲಿ ಮೂರು ದಿನ ನಡೆದ ಈ ತಂತ್ರಜ್ಞಾನ ಮೇಳವು ದೇಶದಲ್ಲಿಯೇ ಮೊದಲ ಜಿಸಿಸಿ ಕಾರ್ಯನೀತಿ ಅನಾವರಣ, ಕೌಶಲಾಭಿವೃದ್ಧಿ ಉದ್ದೇಶದ ‘ನಿಪುಣ ಕರ್ನಾಟಕ’ ಯೋಜನೆಯ ಉದ್ಘಾಟನೆ, ಬಾಹ್ಯಾಕಾಶ ಕರಡು ನೀತಿ 2024–29ರ ಪ್ರಕಟಣೆ ಮತ್ತು ಸ್ಟಾರ್ಟಪ್‌ಗಳು ಅಭಿವೃದ್ಧಿಪಡಿಸಿರುವ 50 ನವೀನ ಉತ್ಪನ್ನಗಳ ಲೋಕಾರ್ಪಣೆಗಳಿಗೆ ಸಾಕ್ಷಿಯಾಯಿತು. ಏಷ್ಯಾದ ಅತ್ಯಂತ ದೊಡ್ಡ ತಾಂತ್ರಿಕ ಸಮಾವೇಶವೆಂದು ಹೆಸರಾಗಿರುವ ಈ ಮೇಳದಲ್ಲಿ ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಸೇರಿದಂತೆ ಪ್ರಪಂಚದ 51 ದೇಶಗಳ ನೀತಿನಿರೂಪಕರು, ಮುಂಚೂಣಿ ಕಂಪನಿಗಳ ಕಾರ್ಯನಿರ್ವಹಣಾಧಿಕಾರಿಗಳು, ಸಂಶೋಧಕರು ಮತ್ತು ತಂತ್ರಜ್ಞಾನ ಪರಿಣತರು ಪಾಲ್ಗೊಂಡಿದ್ದರು. ತಂತ್ರಜ್ಞಾನಕ್ಕೆ ಸಂಬಂಧಿಸಿದ 81 ಆಸಕ್ತಿದಾಯಕ ಗೋಷ್ಠಿಗಳಲ್ಲಿ 521 ತಜ್ಞರು ತಂತ್ರಜ್ಞಾನ ಲೋಕದ ವಿದ್ಯಮಾನಗಳ ಮೇಲೆ ಬೆಳಕು ಚೆಲ್ಲಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉದ್ಘಾಟನೆಗೊಂಡ 27ನೇ ಆವೃತ್ತಿಯ ಈ ಶೃಂಗದಲ್ಲಿ ರಾಜ್ಯದ ಪ್ರಪ್ರಥಮ “ಜಿಸಿಸಿ ಕಾರ್ಯನೀತಿ” ಪ್ರಕಟಗೊಂಡಿತು. ದೇಶದ ಮೊದಲ ಜಿಸಿಸಿ (ಗ್ಲೋಬಲ್ ಕೇಪಬಿಲಿಟಿ ಸೆಂಟರ್–ಜಾಗತಿಕ ಸಾಮರ್ಥ್ಯಕೇಂದ್ರ) ಕಾರ್ಯನೀತಿಯೂ ಇದಾಗಿದ್ದು, ಇದರ ಭಾಗವಾಗಿ ರಾಜ್ಯದ ಬೆಂಗಳೂರು, ಮೈಸೂರು ಮತ್ತು ಬೆಳಗಾವಿಗಳನ್ನು ಮೂರುಜಾಗತಿಕ ನವೀನತೆಯ ಜಿಲ್ಲೆಗಳನ್ನಾಗಿ (ಗ್ಲೋಬಲ್ ಇನ್ನೊವೇಷನ್ ಡಿಸ್ಟ್ರಿಕ್ಟ್) ಅಭಿವೃದ್ಧಿಪಡಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಜೊತೆಗೆ, ಮೈಸೂರಿನ ಕೋಚನಹಳ್ಳಿಯಲ್ಲಿ ಎಲೆಕ್ಟ್ರಾನಿಕ್ ತಯಾರಿಕಾ ಕ್ಲಸ್ಟರ್ ಅಭಿವೃದ್ಧಿ ಪಡಿಸುವ ದಿಸೆಯಲ್ಲಿಯೂ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಲಿದೆ.

ಮುಖ್ಯಮಂತ್ರಿಯವರು ವಿವರಿಸಿರುವಂತೆ, ಹೊಸ ‘ಜಿಸಿಸಿ ಕಾರ್ಯನೀತಿ’ಯು ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಹಾಲಿ ಇರುವ 875 ಜಿಸಿಸಿ ಘಟಕಗಳ ಜೊತೆಗೆ ಇನ್ನೂ 500 ಜಿಸಿಸಿ ಘಟಕಗಳ ಸ್ಥಾಪನೆ, 3.5 ಲಕ್ಷ ಉದ್ಯೋಗಗಳ ಸೃಷ್ಟಿ ಹಾಗೂ ಆರ್ಥಿಕ ಉತ್ಪಾದನೆಯನ್ನು 50 ಶತಕೋಟಿ ಡಾಲರ್‌ಗಳಿಗೆ ಹೆಚ್ಚಿಸುವ ಗುರಿಗಳಿಂದ ಕೂಡಿದೆ.

**“ನಿಪುಣ ಕರ್ನಾಟಕ” ಯೋಜನೆಯಡಿ ಕೌಶಲ ತರಬೇತಿ:** ರಾಜ್ಯದಲ್ಲಿನ ಉದ್ದಿಮೆಗಳ ಅಗತ್ಯಗಳಿಗೆ ಅನುಗುಣವಾಗಿ ಮಾನವ ಸಂಪನ್ಮೂಲವನ್ನು ಸ್ಥಳೀಯವಾಗಿ ಒದಗಿಸುವುದು ಸರ್ಕಾರದ ಆದ್ಯತೆಯಾಗಿದೆ. ಇದನ್ನು ದೃಷ್ಟಿಯಲ್ಲಿರಿಸಿಕೊಂಡು, ಯುವಜನತೆಗೆ ಕೌಶಲ ತರಬೇತಿ ನೀಡುವ ಉದ್ದೇಶದಿಂದ ರೂಪಿಸಲಾಗಿರುವ ‘ನಿಪುಣಕರ್ನಾಟಕ’ ಯೋಜನೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಇದೇ ಸಂದರ್ಭದಲ್ಲಿ ಉದ್ಘಾಟಿಸಿದರು.

▶▶ 4ನೇ ಪುಟಕ್ಕೆ...

## ಗುಣಮಟ್ಟದ ಶಿಕ್ಷಣಕ್ಕಾಗಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿಗೆ ‘ನ್ಯಾಕ್ ಎ ಗ್ರೇಡ್’ ಮಾನ್ಯತೆ






■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ತುಮಕೂರಿನ ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು 2002ರಲ್ಲಿ ಆರಂಭವಾಗಿದ್ದು, 22 ವರ್ಷಗಳ ಪಯಣ ಮುಗಿಸಿ, ದೇಶದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಂಡು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹೊಸ ಬೆಳಕಾಗಿದೆ. ಇದೀಗ ಸಂಸ್ಥೆಯು “ನ್ಯಾಕ್ ಎ ಗ್ರೇಡ್” ಪಡೆಯುವ ಮೂಲಕತನ್ನ ಸಾಧನೆಗೆ ಮತ್ತೊಂದುಗರಿ ಸೇರಿಸಿಕೊಂಡು ಸಂಸ್ಥೆಯು ಸಂಶೋಧನೆ ಮತ್ತು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿರ್ವಹಣೆಯಲ್ಲಿಯೂ ಹೊಸ ಭರವಸೆಯನ್ನು ಮೂಡಿಸಿದೆ.

▶▶ 6ನೇ ಪುಟಕ್ಕೆ...

# ಎಲ್ಲರಿಗೂ ನಾನು, ನನಗಾಗಿ ಎಲ್ಲರೂ...

▶▶ ಮೊದಲನೇ ಪುಟದಿಂದ

2024–25ರ ಅವಧಿಯಲ್ಲಿ ಇಲ್ಲಿಯವರೆಗೆ ಬಡ್ಡಿ ರಹಿತವಾಗಿ ಮೂರರಿಂದ ಐದು ಲಕ್ಷದವರೆಗೆ ಅಲ್ಪಾವಧಿ ಸಾಲವನ್ನು ನೀಡಲಾಗಿದೆ. ಶೇಕಡ 3ರ ಬಡ್ಡಿ ದರದಲ್ಲಿ 10 ರಿಂದ 15 ಲಕ್ಷದವರೆಗೆ ದೀರ್ಘಾವಧಿ ಸಾಲವನ್ನು ರೈತರಿಗೆ ನೀಡಲಾಗುತ್ತಿದೆ. ಇದರಿಂದ ಕೃಷಿಕ್ಷೇತ್ರ ಎಷ್ಟೊಂದು ಪ್ರಯೋಜನ ಪಡೆಯುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಹಿಂದೆ ರೈತರು ವ್ಯವಸಾಯವನ್ನು ಮಾಡಲು ಲೇವಾದೇವಿದಾರರಿಂದ ಕೈಗಡ ಸಾಲವನ್ನು ತರುತ್ತಿದ್ದರು. ಅವರ ದುಡಿಮೆಯ ಬಹುಮಟ್ಟಿನ ಪಾಲು ಸಾಲದ ಬಡ್ಡಿ ತೀರಿಸುವುದರಲ್ಲಿಯೇ ಮುಗಿದು ಹೋಗುತ್ತಿತ್ತು. ಅನೇಕ ರೈತ ಕುಟುಂಬಗಳು ಸಾಹುಕಾರರಿಗೆ ಸಾಲ ತೀರಿಸಲಾಗದೆ ಸಾಹುಕಾರರಿಗೆ ತಮ್ಮ ಜಮೀನು ಬರೆದುಕೊಟ್ಟ ಉದಾಹರಣೆಗಳಿವೆ. ಅದರ ವಿರುದ್ಧ ಮೌನಕ್ರಾಂತಿ ಮಾಡಿದ ಕೀರ್ತಿ ಸಹಕಾರ ಸಂಘಗಳಿಗೆ ಸಲ್ಲುತ್ತದೆ. ಆಗಈ ಕಾರಣಕ್ಕಾಗಿಯೇ ದೊಡ್ಡ ಜಮೀನದಾರರು ಸಹಕಾರ ಚಳವಳಿಯನ್ನು ವಿರೋಧಿಸುತ್ತಿದ್ದರು.

ಈಗ ಮತ್ತೊಂದು ಸವಾಲು ಎದುರಾಗಿದೆ. ನಬಾರ್ಡ್‌ನಿಂದ ಶೇಕಡ 58ರಷ್ಟು ಸಾಲ ಅಪೆಕ್ಸ್ ಬ್ಯಾಂಕಿಗೆ ಬರುತ್ತಿತ್ತು. ಅದಕ್ಕೆ ತೊಂದರೆಯಾಗಿದೆ. ಸರ್ಕಾರ ಈ ಸಲ 25,000 ಕೋಟಿ ರೂಪಾಯಿಗಳನ್ನು ರೈತರಿಗೆ ಅಲ್ಪಾವಧಿ ಸಾಲವಾಗಿ ಕೊಡಲು ನಿರ್ಧಾರ ಮಾಡಿದೆ. ನಬಾರ್ಡ್ ಈ ಹಿಂದೆ ಕೊಡುತ್ತಿದ್ದಷ್ಟು ಮೊತ್ತವನ್ನು ರಾಜ್ಯಕ್ಕೆ ಕೊಡದಿದ್ದರೆ ರೈತರಿಗೆ ಸಾಲ ಕೊಡಲು ತೊಂದರೆ ಆಗಬಹುದು. ಕಳೆದ ಸಲ 5,600 ಕೋಟಿಗಳು ರಾಜ್ಯಸರ್ಕಾರಕ್ಕೆ ಸಾಲದ ರೂಪದಲ್ಲಿ ನಬಾರ್ಡ್‌ನಿಂದ ಬಂದಿತ್ತು. ಈಗಅದು 2,340 ಕೋಟಿಗೆ ಇಳಿದಿದೆ. ಇದರಿಂದ ರೈತರಿಗೆ ಮಾತ್ರವಲ್ಲದೆ ದೇಶಕ್ಕೂ ತೊಂದರೆಯಾಗುತ್ತದೆ. ನಿರೀಕ್ಷೆ ಮಾಡಿದಷ್ಟು ಆಹಾರವನ್ನು ಉತ್ಪಾದನೆ ಮಾಡಲು ಕೃಷಿಕ್ಷೇತ್ರಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಜನಸಾಮಾನ್ಯರು ಸಹತೊಂದರೆಗೆ ಒಳಗಾಗುತ್ತಾರೆ. ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರಬಹುದು. ದೇಶದ ಸುಭದ್ರತೆ, ಶಾಂತಿ, ಮತ್ತು ಕಾನೂನು ಸುವ್ಯವಸ್ಥೆಗೆ ಆಹಾರ ಪದಾರ್ಥಗಳು ಸಕಾಲದಲ್ಲಿ ಸುಲಭವಾಗಿ ಜನರಿಗೆ ದೊರೆಯಬೇಕು. ಶ್ರೀಲಂಕಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಅಶಾಂತಿ ಹೆಚ್ಚಿರುವುದಕ್ಕೆ ಅಲ್ಲಿ ಆಹಾರದ ಅಭಾವವೂ ಕಾರಣವಾಗಿದೆ. ಪಾಕಿಸ್ತಾನದಲ್ಲಿ ಒಂದು ಲೀಟರ್ ಹಾಲಿನ ಬೆಲೆ 190 ರೂಪಾಯಿ ಆಗಿದೆಯೆಂದರೆ ಅಲ್ಲಿನ ಪರಿಸ್ಥಿತಿಯನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು.

ಇಂದು ಸಹಕಾರಕ್ಷೇತ್ರ ಇಡೀ ಭಾರತದಲ್ಲಿ ತನ್ನ ಜಾಲವನ್ನು ಹರಡಿಕೊಂಡಿದೆ. 1904ರಲ್ಲಿ ಭಾರತದಲ್ಲಿ ಸಹಕಾರ ಚಳವಳಿ ಪ್ರಾರಂಭವಾಯಿತು. ಬಂಗಾಳದಲ್ಲಿ ಮೊದಲ ಬಾರಿಗೆ ಸಹಕಾರಸಂಘಗಳ ಮೂಲಕ ಸಾಲ ವಿತರಣೆ ಕೂಡ ನಡೆಯಿತು. ಆದರೆ ಕರ್ನಾಟಕ




ರಾಜ್ಯ ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವುದನ್ನು ನಾವು ಮರೆತಿದ್ದೇವೆ. 1905 ಜುಲೈ 8ರಂದು ಸಹಕಾರ ಕಾಯ್ದೆ ಬಂದತರುಣದಲ್ಲೆ ಇಂದಿನ ಗದಗಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನ ಹಾಲು ಗ್ರಾಮದ ಎಸ್.ಎಸ್. ಪಾಟೀಲ್ (ಸಣ್ಣರಾಮನಗೌಡ ಸಿದ್ದರಾಮನಗೌಡ ಪಾಟೀಲ್) ಎನ್ನುವವರು ದೇಶದಲ್ಲಿ ಮೊತ್ತ ಮೊದಲ ಬಾರಿಗೆ ತಮ್ಮ ಗ್ರಾಮದಲ್ಲಿ 'ಕೃಷಿ ಪತ್ತಿನ ಸಹಕಾರ ಸಂಘ' ವನ್ನು ಸ್ಥಾಪಿಸಿ ರೈತರಿಗೆ ಸಾಲ ದೊರೆಯುವಂತೆ ಮಾಡಿದ್ದರು. 1843ರಲ್ಲಿ ಜನಿಸಿದ ಅವರು 1933 ಮರಣ ಹೊಂದಿದರು. ಶ್ರೀಯುತರು ಹಿಂದುಳಿದ ಸಮುದಾಯದ ಕುರುಬ ಜನಾಂಗಕ್ಕೆ ಸೇರಿದವರು. ಇವರನ್ನು ಭಾರತ ಸರ್ಕಾರ 'ಭಾರತದ ಸಹಕಾರ ಪಿತಾಮಹ' ಎಂದು ಗೌರವಿಸಿದೆ. 2004ರಲ್ಲಿ ಸಹಕಾರಕ್ಷೇತ್ರದ ಶತಮಾನೋತ್ಸವ ನಡೆದ ಸಂದರ್ಭದಲ್ಲಿ ಎಸ್.ಎಸ್. ಪಾಟೀಲ್‌ಅವರ ಸೇವೆಯನ್ನು ರಾಜ್ಯ ಸರ್ಕಾರ ಸಹ ಗುರುತಿಸಿದೆ.

ಕರ್ನಾಟಕ ರಾಜ್ಯ ಭಾರತದಲ್ಲಿ ಎರಡು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ. ಅಂದರೆ ನಾವು ಈ ಕ್ಷೇತ್ರದಲ್ಲಿ ಒಳ್ಳೆಯ ಸಾಧನೆ ಮಾಡಿದ್ದೇವೆ. ಇವುಗಳಲ್ಲಿ ಮೊದಲನೆಯದು ಎಸ್.ಎಸ್. ಪಾಟೀಲ್‌ಅವರು ಪ್ರಾರಂಭಿಸಿದ ಸಹಕಾರಕ್ಷೇತ್ರ. ಅನಂತರ ಇತರ ಕಡೆ ಕೃಷಿ ಸಹಕಾರ ಸಂಘಗಳು ಪ್ರಾರಂಭವಾದವು. ಮತ್ತೊಂದು ಗ್ರಾಮ ಪಂಚಾಯಿತಿ. ದೇಶದಲ್ಲಿ ಮೂರು ಹಂತದ ಸ್ಥಳೀಯ ಸಂಸ್ಥೆಯ ಆಡಳಿತ ಬರಲು ನಮ್ಮಲ್ಲಿ 1983ರ 'ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆಯ' ಮಸೂದೆ ಕಾರಣವಾಗಿದೆ. ಸಹಕಾರ ಕ್ಷೇತ್ರದ ಮುಖ್ಯ ಸಂದೇಶ "ಎಲ್ಲರಿಗೂ ನಾನು, ನನಗಾಗಿ ಎಲ್ಲರೂ". ಸಹಕಾರಕ್ಷೇತ್ರವು ಪರಸ್ಪರ ನಂಬಿಕೆ, ಸಹಕಾರ ಮತ್ತು ವಿಶ್ವಾಸದೊಡನೆ ನಡೆಯಬೇಕು. ಜೇನನೊಣ ಮತ್ತು ಇರುವೆಗಳಂತೆ ಮನುಷ್ಯನೂ ಸಹಬಾಳ್ವೆ ನಡೆಸಬೇಕು ಎಂದು ಸಹಕಾರತತ್ವ ಹೇಳುತ್ತದೆ. ಸ್ವಾತಂತ್ರ್ಯದ ಅನಂತರ ಭಾರತದಲ್ಲಿ ಸಹಕಾರ ಚಳುವಳಿ ಇಷ್ಟೊಂದು ಸಮರ್ಥವಾಗಿ ಬೆಳೆಯದಿದ್ದಿದ್ದರೆ ಜಿಲ್ಲೆಗೊಬ್ಬರು ಟಾಟಾ, ಬಿರ್ಲಾ, ಅಂಬಾನಿ, ಅದಾನಿ, ಮೊದಲಾದ ಬಂಡವಾಳಶಾಹಿಗಳು ಜನ್ಮತಾಳುತ್ತಿದ್ದರು.

## ಸಹಕಾರರತ್ನ ಪ್ರಶಸ್ತಿ ಪುರಸ್ಕೃತರು

**ಶ್ರೀಯುತರುಗಳಾದ ಗಂಗಹನುಮಯ್ಯ, ಪಿ.ಮೂರ್ತಿ, ಕೆ.ಮಲ್ಲಿಕಾರ್ಜುನಯ್ಯ (ಹೆಬ್ಬಾಕ), ಜಿ.ಜೆ.ರಾಜಣ್ಣ, ಎಸ್.ಲಕ್ಷ್ಮೀನಾರಾಯಣ್, ಬಿ.ಸಿ.ಉಮೇಶ್, ಜಿ.ಎಸ್.ರವಿ, ಶ್ರೀಮತಿ ಪಿ. ಶಾರದಮ್ಮ, ಪಿ.ಎಸ್.ಗುರುಪ್ರಸಾದ್, ಎಸ್. ರಾಮಚಂದ್ರಯ್ಯ, ಎಲ್. ರಾಮಣ್ಣ, ರಾಮಚಂದ್ರ ಕಲ್ಯಾಣರಾವ್ ಪಾಟೀಲ್ ಸರಸಾಂಭಾರ, ಹೆಚ್. ಚಂದ್ರಶೇಖರಾರಾಧ್ಯ, ಶ್ರೀಮತಿ ಟಿ.ಎನ್.ಆಶಾಕಿರಣ್, ಎಸ್. ಎಲ್.ರಂಗನಾಥ್, ಟಿ.ಹೆಚ್.ಶಿವಾನಂದ್, ಸೈಯದ್ ಮಹಬೂಬ್ ಪಾಷ ಮತ್ತು ಎಸ್. ಹೆಚ್.ಸಿದ್ದಪ್ಪನವರು. ಇವರೆಲ್ಲರಿಗೂ ಹಾಗೂ ಕರ್ನಾಟಕ ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಅನುಪಮ ಸೇವೆಯನ್ನು ಸಲ್ಲಿಸಿರುವ ಮತ್ತು ಹಿಂದುಳಿದವರ ವಿಚಾರದಲ್ಲಿ ಬದ್ಧತೆಯನ್ನುಳ್ಳ ಕರ್ನಾಟಕ ರಾಜ್ಯದ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ಅವರಿಗೂ 'ಶ್ರೀದೇವಿ ಅಂತರಂಗ'ವು ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.**

ಸಹಕಾರಕ್ಷೇತ್ರದಿಂದ ಕ್ಷೀರಕ್ರಾಂತಿಯಾಗಿ ಗುಜರಾತ್, ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಮಹಿಳೆಯರ ಸಬಲೀಕರಣ ಸಮರ್ಥವಾಗಿ ನಡೆದಿದೆಎಂದು ವಿಶ್ವಸಂಸ್ಥೆಯ ಆರ್ಥಿಕ ಸಲಹಾ ಸಮಿತಿಯ ವರದಿ ಹೇಳುತ್ತದೆ. ಹಸಿರು ಕ್ರಾಂತಿ (ಕೃಷಿ), ಬಿಳಿ ಕ್ರಾಂತಿ (ಹೈನುಗಾರಿಕೆ), ಹಳದಿ ಕ್ರಾಂತಿ(ಕೋಳಿ ಸಾಕಾಣಿಕೆ), ನೀಲಿ ಕ್ರಾಂತಿ (ಮೀನುಗಾರಿಕೆ) ಇವುಗಳಲ್ಲದೆ ಇತರ ಕ್ಷೇತ್ರಗಳಲ್ಲೂ ಸಹಕಾರಿ ಸಂಸ್ಥೆಗಳು ಜನ್ಮ ತಾಳಿರುವುದನ್ನು ನಾವು ಗಮನಿಸಬಹುದು. ತೋಟಗಾರಿಕೆ, ಗೃಹ ನಿರ್ಮಾಣ, ಸಣ್ಣಕೈಗಾರಿಕೆ, ನೀರಾವರಿ, ಗಿರಿಜನಕಲ್ಯಾಣ, ಆರೋಗ್ಯ, ಮಾನವ ಸಂಪನ್ಮೂಲ ಅಭಿವೃದ್ಧಿ, ಮಾಹಿತಿತಂತ್ರಜ್ಞಾನ, ಶಿಕ್ಷಣ ಮೊದಲಾದ ಹತ್ತು ಹಲವು ಕ್ಷೇತ್ರಗಳಲ್ಲಿ ಸಹಕಾರಿ ತತ್ತ್ವಗಳು ತಮ್ಮ ಪ್ರಭಾವ ಬೀರಿರುವುದನ್ನುಕಾಣಬಹುದು.

ಕರ್ನಾಟಕ ಸಹಕಾರಕ್ಷೇತ್ರದಲ್ಲಿ ಎರಡು ಹೊಸ ಬೆಳವಣಿಗೆಯನ್ನು ತಮ್ಮ ಗಮನಕ್ಕೆ ತರಬೇಕು. ಮೊದಲನೆಯದ 'ಸ್ತ್ರೀಶಕ್ತಿ ಯೋಜನೆ.' ಎರಡನೆಯದು ಆರೋಗ್ಯ ವಲಯದ 'ಯಶಸ್ವಿನಿ'. ಸ್ತ್ರೀಶಕ್ತಿ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಪ್ರಯೋಜನ ಕಂಡಿಲ್ಲ. ಆದರೆ ಯಶಸ್ವಿನಿ ಯೋಜನೆ ಗ್ರಾಮೀಣ ಪ್ರದೇಶದ ಜನತೆಯ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.

ಸಹಕಾರಿಕ್ಷೇತ್ರದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾಕಷ್ಟು ಭಿನ್ನತೆಯಿರುವುದನ್ನು ಗುರುತಿಸಬಹುದು. ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಚಟುವಟಿಕೆಗಳಿಗೆ ಸರ್ಕಾರ ನೀಡುವ ಸಹಾಯವನ್ನು ಸಹಕಾರಕ್ಷೇತ್ರ ಸಮರ್ಥವಾಗಿ ಬಳಸಿಕೊಂಡು ದೇಶದ ಆರ್ಥಿಕ ಅಭಿವೃದ್ಧಿಗೆ ಅಮೂಲ್ಯವಾದ ಸಹಾಯಮಾಡುತ್ತಿದೆ. ಇದರಿಂದ ರೈತರಿಗೂ ಅನುಕೂಲ, ಗ್ರಾಹಕರಿಗೂ ಅನುಕೂಲ. ದೇಶದ ವಾಣಿಜ್ಯಕ್ಷೇತ್ರಕ್ಕೆ ದೊಡ್ಡ ಪ್ರಯೋಜನ ದೊರೆಯುತ್ತಿದೆ. ಉದಾಹರಣೆಗೆ ಹೇಳುವುದಾದರೆ ಮಲೆನಾಡು ಪ್ರದೇಶದ ವಾಣಿಜ್ಯ ಬೆಳೆ ಅಡಿಕೆಯ ವಿಸ್ತರಣೆಯು ಸಹಕಾರಕ್ಷೇತ್ರದ ಮೂಲಕವೇ ಸಾಧ್ಯವಾಗಿದೆ. ಅದೇರೀತಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಬೆಳಗಾಂ ಮತ್ತು ಇತರ ಭಾಗದ ರೈತರು ಕಬ್ಬಿನ ಮೂಲಕ ಸಹಕಾರಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಸಹಕಾರಕ್ಷೇತ್ರದಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಿ ಉತ್ತಮಕೆಲಸ ಮಾಡುತ್ತಿವೆ. ಆದರೆ ನಗರ ಪ್ರದೇಶದ ಸಹಕಾರಕ್ಷೇತ್ರದಲ್ಲಿನ ಕೆಲವು ಸಹಕಾರಿ ಬ್ಯಾಂಕುಗಳಲ್ಲಿ ಅವ್ಯವಹಾರಗಳು ನಡೆದಿವೆ. ಬೆಂಗಳೂರು ಮತ್ತು ಇತರ ಕಡೆ ಈ ಬ್ಯಾಂಕುಗಳು ನಡೆಸಿರುವ ಅವ್ಯವಹಾರಗಳು ಅನೇಕ ಅಮಾಯಕ ಜನರ ಬದುಕನ್ನು ಬಲಿ ತೆಗೆದುಕೊಂಡಿರುವುದು ದುರದೃಷ್ಟದ ಸಂಗತಿ.

ಸಹಕಾರಕ್ಷೇತ್ರದಲ್ಲಿ ಕೆಲಸ ಮಾಡುವವರು ಈ ವಿಚಾರದ ಬಗ್ಗೆ ಚಿಂತಿಸಬೇಕು. ಕೆಲವರು ನಡೆಸುವ ಅವ್ಯವಹಾರಗಳು ಇಡೀ ಸಹಕಾರಕ್ಷೇತ್ರದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕೊಡುವ ನೆರವನ್ನು ಬಳಸಿಕೊಳ್ಳುವಲ್ಲಿ ಇಂಥ ಘಟನೆಗಳಿಂದ ತೊಂದರೆಯಾಗಬಹುದು. "ಇಂತಹ ಅನ್ಯಾಯಗಳು ನಡೆದಾಗ ಸಹಕಾರಿಕ್ಷೇತ್ರದಎಲ್ಲಾಧುರೀಣರನ್ನು ನೀವುಗಳು ಒಟ್ಟಾಗಿ ಸೇರಿಸಿ ಇಂತಹ ಅಕ್ರಮಗಳನ್ನು ತಡೆಯಬೇಕು. ಯಾರು ತಪ್ಪು ಮಾಡುತ್ತಾರೆ ಅವರನ್ನು ಸಂಘದಿಂದ ಮತ್ತು ಸಹಕಾರಕ್ಷೇತ್ರದಿಂದ ಹೊರಹಾಕಬೇಕು" ಎನ್ನುವುದು ನನ್ನ ಪ್ರಾರ್ಥನೆ. ಸರ್ಕಾರ ಇಂತಹವರನ್ನು ಶಿಕ್ಷಿಸಲು ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕು.

▪ ನಿರೂಪಣೆ: ಶ್ರೀವತ್ಸ

# ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ ಡಿಜೀ(Digii) ಮಾನ್ಯತೆ

ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾಕೇಂದ್ರವು ಡಿಜಿಟಲ್ ವೇದಿಕೆಯಲ್ಲಿ ಮಾನ್ಯತೆ ಪಡೆದಿದೆ. ಇದರಿಂದಾಗಿ ವೈದ್ಯಕೀಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಚಾರಗಳು ವಿಶ್ವದ ಎಲ್ಲೆಡೆ ಲಭ್ಯವಾಗುತ್ತದೆ. ಅಲ್ಲದೆ, ಶ್ರೀದೇವಿ ಈ ಮೂಲಕ ವೈದ್ಯಕೀಯ ಕಾಲೇಜಿನ ಆಡಳಿತ ವ್ಯವಸ್ಥೆಯ ಪಾರದರ್ಶಕತೆಯು ಎಲ್ಲರಿಗೂಅರಿವಿಗೆ ಬರುತ್ತದೆ.

ಶ್ರೀದೇವಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆದ ದಿನದಿಂದಲೇ ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ವಿವರಗಳನ್ನು ಹಾಗೂ ಕಾಲೇಜಿನ ಆಡಳಿತ ಮತ್ತು ಶೈಕ್ಷಣಿಕ ವಿವರಗಳನ್ನು ಡಿಜಿಟಲ್ ವೇದಿಕೆಗೆ ಒದಗಿಸಲಾಗುತ್ತದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ ಮತ್ತು ಪಠ್ಯೇತರ ವಿವರಗಳಿಗೂ ಇದರಲ್ಲಿ ಅವಕಾಶವಿದೆ. ಇದರಿಂದ ವಿದ್ಯಾರ್ಥಿಗಳ ಎಲ್ಲ ಮಾಹಿತಿಗಳೂ ಪೋಷಕರಿಗೆ ದೊರೆಯುತ್ತವೆ.

ಇಂತಹ ಅಪೂರ್ವ ಸಾಧನೆ ಮಾಡಿ, 'ರಾಷ್ಟ್ರೀಯ ಮಾನ್ಯತೆ'ಯನ್ನು ಪಡೆದಿರುವ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರು ಮತ್ತು ಸಿಬ್ಬಂದಿಯನ್ನು ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ ಹುಲಿನಾಯ್ಕರ್ ಮತ್ತು ಸಂಸ್ಥೆಯ ಐ.ಟಿ. ಮತ್ತು ಮಾನವ ಸಂಪನ್ಮೂಲ ಶಾಖೆಯ ಮುಖ್ಯಸ್ಥರಾದ ಎಂ.ಎಸ್.ಪಾಟೀಲ್‌ಅವರು ಅಭಿನಂದಿಸಿದ್ದಾರೆ.




**ಚಿತ್ರ ಎಡಗಡೆಯಿಂದ ಶ್ರೀಯುತರುಗಳಾದ ಶಜಿಇಲ್‌ಅಹ್ಮದ್, ಉಪಾಧ್ಯಕ್ಷರು ಡಿಜೀ, ರಾಜೇಶ್, ಸಿ.ಇ.ಓ.ಡಿಜೀ, ಹೇಮಂತಸಹಲ್, ಸಿ.ಇ.ಓ.ಡಿಜೀ, ಡಾ.ಎಂ.ಎಲ್.ಹರೇಂದ್ರಕುಮಾರ್, ಪ್ರಾಂಶುಪಾಲರು, ಶ್ರೀದೇವಿ ವೈದ್ಯಕೀಯ ಕಾಲೇಜು, ಪ್ರದೀಪ್‌ಕುಮಾರ್‌ವೇಗಿಸಿ. ಇ.ಓ. ಶ್ರೀದೇವಿ ವೈದ್ಯಕೀಯ ಕಾಲೇಜು. ಅರ್ಜುನ್ ವಾಜಪೇಯಿ, ಯುವ ಪರ್ವತ ಆರೋಹಿಣಿ ಹಾಗೂ ಹನೀಫ್ ಮಹಮ್ಮದ್. ಸಿ.ಇ.ಓ. ಏಷ್ಯಾನ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್.**

ಪತ್ರಿಕೆಯ ಬಳಗ
ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್
ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್
ಸಲಹಾ ಸಂಪಾದಕರು
ಎನ್.ಭಾರತಿ
ಸಂಪಾದಕ ಮಂಡಳಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋಜ್ಞಣಿ ಎಂ.ಎಚ್
ಡಾ. ಲಾವಣ್ಯ ರಮಣ
ಸಹಾಯಕ ಸಂಪಾದಕರು:
ಎನ್. ಆನಂದ
ಪುಟ ವಿನ್ಯಾಸ:
ಸುಮಾ ಸಾಗರ್

# ಮೂರ್ಛೆರೋಗ, ಸಮಾಜದಲ್ಲಿನ ತಪ್ಪು ಕಲ್ಪನೆ: ಸತ್ಯ–ಮಿಥ್ಯ!!

▪ ಕೆ.ಎಸ್. ರಾಜಮನ್ನಾರ್

ತಲೆನೋವು, ಮೂರ್ಛೆರೋಗ ವಿವಿಧ ರೀತಿಯ ನೋವು–ಬಾಧೆಗಳ ಬಗ್ಗೆ ವೈದ್ಯರು, ಜನರು ವಿಶೇಷವಾಗಿ ವೈದ್ಯಕೀಯ ವಿದ್ಯಾರ್ಥಿಗಳು ಚೆನ್ನಾಗಿ ತಿಳಿದುಕೊಳ್ಳಬೇಕು. ಎಂದು ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಎಂ.ಟಿ.ಸತ್ಯನಾರಾಯಣ ಪ್ರತಿಪಾದಿಸಿದ್ದಾರೆ.

ಮೂರ್ಛೆರೋಗ, ಇನ್ನಿತರ ಮಾನಸಿಕ ಖಾಯಿಲೆಗಳ ಬಗ್ಗೆ ಹಾಗು ಅವುಗಳಿಗೆ ದೊರಕುವ ಹೊಸ ಚಿಕಿತ್ಸಾ ವಿಧಾನಗಳ ಬಗ್ಗೆ ತಿಳುವಳಿಕೆ ಪಡೆಯುವ ಉದ್ದೇಶದಿಂದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಮನೋವೈದ್ಯಕೀಯ ಹಾಗೂ ನರರೋಗ ವಿಭಾಗ ಇತ್ತಿಚೆಗೆ ಜಂಟಿಯಾಗಿ ಏರ್ಪಡಿಸಿದ್ದ ಮೂರ್ಛೆರೋಗ ನಿಯಂತ್ರಣಾ ಕಾರ್ಯಾಗಾರದಲ್ಲಿ (CME on neuro psychiatric Aspects of epilepsy) ಅವರು ವಿಷಯ ತಿಳಿಸಿದ್ದಾರೆ.

ಬದಲಾದ ಸಾಮಾಜಿಕ ಪರಿಸ್ಥಿತಿ ಮತ್ತು ನಗರೀಕರಣದ ಒತ್ತಡಗಳಿಂದಾಗಿ ಮಾನಸಿಕ ಖಾಯಿಲೆಗಳು, ಖಿನ್ನತೆ, ಒತ್ತಡ ಹೆಚ್ಚಾಗುತ್ತಿವೆ. ವೈದ್ಯಕೀಯ ಅಧ್ಯಯನದ ಪ್ರಕಾರ ದೇಶದಲ್ಲಿ ಸುಮಾರು 25 ಕೋಟಿಗೂ ಹೆಚ್ಚು ಜನ ಒಂದಲ್ಲ ಒಂದು ರೀತಿಯ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದಾರೆ. ಇವರ ಪೈಕಿ ಶೇಕಡ 2ರಷ್ಟು ಜನರು ತೀವ್ರ ಪ್ರಮಾಣದ ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಇದರ ಜೊತೆಗೆ ಪ್ರತಿ ವರ್ಷ 50 ಸಾವಿರದಿಂದಒಂದು ಲಕ್ಷಜನ ಮಾನಸಿಕ ಕಾಯಿಲೆಗೆ ತುತ್ತಾಗುತ್ತಿದ್ದಾರೆ ಮತ್ತುಈ ಸಂಖ್ಯೆ ಏರುಗತಿಯಲ್ಲಿದೆ. ನೈಜ ಸಮಸ್ಯೆ ಏನೆಂದರೆ, ಶೇಕಡ 50 ರಷ್ಟು ಜನರು ಯಾವುದೇ ಚಿಕಿತ್ಸೆ ಮತ್ತು ತಪಾಸಣೆ ಮಾಡಿಸಿಕೊಳ್ಳುವುದೇ ಇಲ್ಲ. ಅಲ್ಲದೆ ಹಲವರು ಕಾಯಿಲೆಯನ್ನು ಕುರಿತು ಮನೆಯವರ ಬಳಿಯೂ ಚರ್ಚಿಸಲು ಹಿಂದೇಟು ಹಾಕುತ್ತಾರೆ. ಇನ್ನೂ ಕೆಲವರು ಆರಂಭಿಕ ಹಂತದಲ್ಲಿ ಚಿಕಿತ್ಸೆ ಪಡೆದುಕೊಂಡು ತದನಂತರ ತಾವೇ ಸ್ವಯಂ ನಿರ್ಧಾರದ ಮೂಲಕ ಮಾತ್ರೆಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿಬಿಡುತ್ತಾರೆ. ಇದು ಅಪಾಯಕಾರಿ ಬೆಳವಣಿಗೆ, ಇಂತಹವರಿಗೆ ಆಪ್ತ ಸಮಾಲೋಚನೆ ಅಗತ್ಯವಾಗಿ ಬೇಕಾಗುತ್ತದೆ.


ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಿಗೆ ಈಗ ಮನೋವೈದ್ಯರು ಭೇಟಿ ನೀಡುತಿದ್ದಾರೆ, 80 ಮತ್ತು 90ರದಶಕಗಳಲ್ಲಿದ್ದ ಪರಿಸ್ಥಿತಿಗೆ ಹೋಲಿಕೆ ಮಾಡಿದರೆ, ಇಂದು ತಾಲೂಕು ಮತ್ತುಜಿಲ್ಲಾ ಆಸ್ಪತ್ರೆಗಳಲ್ಲಿ ಮನೋವೈದ್ಯರ ಸೇವೆ, ಆಪ್ತ ಸಮಾಲೋಚನೆ ಚಿಕಿತ್ಸೆಗಳು ಸುಧಾರಿಸಿವೆ. ಹಿಂದೆ ತುಮಕೂರು ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಮಧುಗಿರಿ ಮತ್ತು ಕೊರಟಗೆರೆ ತಾಲೂಕಿನಲ್ಲಿ ಮಾನಸಿಕ ಕಾಯಿಲೆಗಳಿಗೆ ಔಷಧೋಪಚಾರ ಮಾಡಲು ಬೆಂಗಳೂರಿನ ನಿಮಾನ್ಸ್‌ನಿಂದ ನುರಿತ ಮನೋವೈದ್ಯರನ್ನು ಕರೆಸುವ ಅನಿವಾರ್ಯತೆಯಿತ್ತು.

ಈಗಪರಿಸ್ಥಿತಿಯು ಬದಲಾಗಿದ್ದು ಸರ್ಕಾರಿ ಆಸ್ಪತ್ರೆಗಳಲ್ಲಿನ ಮನೋವೈದ್ಯರೇ ತಾಲೂಕು ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಮತ್ತು ತಪಾಸಣೆ ಮಾಡುತ್ತಿರುವುದು ಸಮಾಧಾನಕರ ಸಂಗತಿ.

### ಸತ್ಯ ಮತ್ತು ಮಿಥ್ಯ

ಮೂರ್ಛೆರೋಗ ಹಾಗೂ ಇನ್ನಿತರ ನರರೋಗ/ ಮಾನಸಿಕ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿ ಬೇರೂರಿರುವ ತಪ್ಪುಕಲ್ಪನೆ ದೂರವಾಗಬೇಕು. ಇಂದು ದೇಶದಲ್ಲಿ ಶೇಕಡ 15 ರಷ್ಟುಜನರು ಮಾನಸಿಕ ಕಾಯಿಲೆಗಳಿಂದ ಬಳಲುತ್ತಿದ್ದಾರೆ.

ಮುಂದುವರಿದ ದೇಶಗಳಿಗೆ ಹೋಲಿಕೆ ಮಾಡಿದರೆ ದೇಶದಲ್ಲಿ ಮನೋವೈದ್ಯರ ಸಂಖ್ಯೆ ಬಹಳ ಕಡಿಮೆಯಿದೆ. ಆ ದೇಶಗಳಲ್ಲಿ ಸುಮಾರು 200 ರಿಂದ 300 ಜನಕ್ಕೆ ಒಬ್ಬ ಮನೋವೈದ್ಯರಿದ್ದರೆ ನಮ್ಮದೇಶದಲ್ಲಿ 10 ಸಾವಿರ ಜನ ಸಂಖ್ಯೆಗೂ ಒಬ್ಬ ಮನೋವೈದ್ಯರಿಲ್ಲ ಎಂಬುದು ಆಘಾತಕಾರಿ ಸಂಗತಿ. ಕಾಯಿಲೆಗಳ




ವಿಚಾರದಲ್ಲಿ ಜನಸಾಮಾನ್ಯರಲ್ಲಿರುವ ತಪ್ಪು ಕಲ್ಪನೆಗಳು ದೂರವಾಗಬೇಕಿದೆ. ಉದಾಹರಣೆಗೆ ದಾರಿಯಲ್ಲಿ ಯಾರಾದರೂ ಒಬ್ಬ ವ್ಯಕ್ತಿ ಮೂರ್ಛೆ ಹೋದರೆ ಅವನಿಗೆ ಬೀಗದಕೈ ಅಥವಾ ಕಬ್ಬಿಣದ ಕಂಬಿಯನ್ನು ಕೊಡುವ ಸಂಪ್ರದಾಯ ಪರಿಪಾಠ ಇಂದಿಗೂ ಮುಂದುವರಿದಿದೆ. ಇದರಿಂದಂ ಯಾವುದೇ ಪ್ರಯೋಜನವಿಲ್ಲ. ಇಂತಹತಪ್ಪು ಕಲ್ಪನೆ ನಿವಾರಣೆಗೆ ಜನಜಾಗೃತಿ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಮೂಹ ಮಾಧ್ಯಮಗಳು ಮತ್ತು ವೈದ್ಯಕೀಯ ಸಮುದಾಯ ಜನರನ್ನು ಎಚ್ಚರಿಸಬೇಕಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳು ಕಂಡುಬಂದಿವೆ. ಈಗ ಯಾವುದೇ ಕಾಯಿಲೆ ಮತ್ತು ಸಮಸ್ಯೆಗಳಿಗೆ ವಿವಿಧ ಕ್ಷೇತ್ರಗಳ ಪರಿಣಿತ ವೈದ್ಯರ ತಂಡದ ಚಿಕಿತ್ಸೆ ಆವಶ್ಯಕತೆಯಿದೆ. ಮೊದಲು ಮಾನಸಿಕ ಕಾಯಿಲೆ ಎಂದರೆ ಕೇವಲ ನರರೋಗ, ಮನೋವೈದ್ಯರು ಮಾತ್ರ ನೋಡಬಹುದು ತಪಾಸಣೆ ಮಾಡಬಹುದು ಎಂಬ ಭಾವನೆಯಿತ್ತು. ಆದರೆ ಇಂದು ಪರಿಸ್ಥಿತಿ ಭಿನ್ನವಾಗಿದೆ. ನರರೋಗ ತಜ್ಞರು ಫಿಜಿಷಿಯನ್, ನ್ಯೂರೋ ಸರ್ಜನ್, ಪೀಡಿಯಾಟ್ರಿಕ್ ನ್ಯೂರೋ ಸರ್ಜನ್ ಹೀಗೆ ವಿವಿಧ ಕ್ಷೇತ್ರಗಳ ಪರಿಣಿತ ವೈದ್ಯರ ತಂಡ ಚಿಕಿತ್ಸೆ ನೀಡಿದರೆ ಹೆಚ್ಚು ಪರಿಣಾಮ ಬೀರಲಿದೆ. ಇದಕ್ಕೆ ವೈದ್ಯಕೀಯ ಭಾಷೆಯಲ್ಲಿ ಸಿಎಂಇ (Continued Medical education) ಕಂಟಿನ್ಯೂಡ್ ಮೆಡಿಕಲ್ ಎಜುಕೇಶನ್ ಮತ್ತು ಮಲ್ಟಿ ಡಿಸಿಪ್ಲಿನರಿ ಟೀಮ್ (Multi Diciplinary Team) ಎಂದು ಕರೆಯಲಾಗುತ್ತದೆ.

### ಸಿಎಂಇ ಕಾರ್ಯಾಗಾರ ಎಂದರೆ ಏನು?

ಮಾನಸಿಕ ಖಾಯಿಲೆಗಳಿಗೆ ಈಗ ದೊರಕುತ್ತಿರುವ ಆಧುನಿಕ ಚಿಕಿತ್ಸೆಯ ವಿಧಾನಗಳ ಬಗೆಗೆ ತಿಳಿದುಕೊಳ್ಳುವುದೇ ಸಿಎಂಇ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ಮನೋವೈದ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಭಾವನಾ ಪ್ರಸಾದ್ ಹೇಳುತ್ತಾರೆ. ಮೂರ್ಛೆರೋಗ ಎಂಬುದು ಚಿಕ್ಕವಯಸ್ಸಿನ ಮಕ್ಕಳಿಂದ ಹಿಡಿದು ವಯಸ್ಸಾದವರಲ್ಲಿ, ಗರ್ಭಿಣಿಯರಲ್ಲಿ ಕಂಡುಬರುವ ಸಾಮಾನ್ಯ ಸಮಸ್ಯೆ. ಇದರಲ್ಲಿಎರಡು ವಿಧವಿದೆ ನ್ಯೂರೋಲಾಜಿಕಲ್ ಸಮಸ್ಯೆ ಮತ್ತು ಸೈಕೊಲಜಿಕಲ್ ಸಮಸ್ಯೆ. ಈ ಚಿಕಿತ್ಸೆಯ ಸಮಯದಲ್ಲಿ ಈ ರೋಗಪೀಡಿತರ ಜೀವನಕ್ರಮ ಹೇಗಿರಬೇಕು, ಏನನ್ನು ಮಾಡಬೇಕು,ಏನನ್ನು ಮಾಡಬಾರದು, ಅವರನ್ನು ಯಾವರೀತಿ ನೋಡಿಕೊಳ್ಳಬೇಕು ಎಂಬುದು ಮುಖ್ಯವಾಗಲಿದೆ. ಮೂರ್ಛೆರೋಗದಿಂದ ಬಳಲುತ್ತಿರುವವರು ದೀರ್ಘಕಾಲ ಮಾತ್ರೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ಕೆಲವು ಅಡ್ಡ ಪರಿಣಾಮಗಳುಆಗಲಿವೆ. ಹೀಗಾಗಿಕೆಲವರು ಮಾತ್ರೆ ತೆಗೆದುಕೊಳ್ಳುವುದನ್ನು ಮಧ್ಯದಲ್ಲೇ ಬಿಟ್ಟುಬಿಡುತ್ತಾರೆ ಮತ್ತು ಸಮಾಜ ನಮ್ಮನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ಕಾರಣಕ್ಕಾಗಿ ಎಲ್ಲರೊಂದಿಗೆ ಬೆರೆಯದೇ ಖಿನ್ನತೆಗೆ ಒಳಗಾಗುತ್ತಾರೆ.ಇಂಥವರಿಗೆಆತ್ಮವಿಶ್ವಾಸ ಮೂಡಿಸಲು ಮನೋವೈದ್ಯರಿಂದ ಕಾಲಕಾಲಕ್ಕೆ ಆಪ್ತ ಸಮಾಲೋಚನೆ ಕೊಡಿಸುವುದು ಅಗತ್ಯ ಎಂಬುದು ಡಾ. ಭಾವನಾ ಪ್ರಸಾದ್ ಅವರ ನಿಲುವು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್ ಮಾತನಾಡಿ, ಇದುಒಂದು ಸಂಕೀರ್ಣ ಸಮಸ್ಯೆ ಇದಕ್ಕೆ ವಿವಿಧ ಕ್ಷೇತ್ರಗಳ ಪರಿಣತ ವೈದ್ಯಕೀಯ ತಂಡದಿಂದ ಚಿಕಿತ್ಸೆ ಪಡೆಯುವುದು ಹೆಚ್ಚು ಸೂಕ್ತ, ಪರಿಣಾಮಕಾರಿ ಎಂದು ಅವರು ಹೇಳಿದರು.



ಸಂಯೋಜಕರು:
**ಡಾ. ಭಾವನಾ ಪ್ರಸಾದ್**

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಎಲ್. ಹರೇಂದ್ರಕುಮಾರ್ ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲಿ ಪ್ರತಿದಿನವೂ ಹೊಸ–ಹೊಸ ಸವಾಲುಗಳು ಎದುರಾಗುತ್ತವೆ. ಇದರ ನಿವಾರಣೆಗೆ ನಿರಂತರಕಲಿಕೆ, ಮತ್ತು ಅಧ್ಯಯನ ಅಗತ್ಯ ಎಂದರು.

ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಪಿಡಿಯಾಟ್ರಿಕ್ ನ್ಯೂರಾಲಜಿ ವಿಭಾಗದ ಪ್ರೊಫೆಸರ್‌ಡಾ. ವೈಕುಂಠರಾಜು, ಶ್ರೀದೇವಿ ವೈದ್ಯಕೀಯ ಕಾಲೇಜಿನ ನ್ಯೂರಾಲಜಿ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್‌ಡಾ. ಎಸ್. ಶ್ರೀಧರ್ ಸೇರಿದಂತೆ ಸುಮಾರು 200 ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಾಗಾರದಲ್ಲಿ ಭಾಗಿಯಾಗಿದ್ದರು.

ವೇದಿಕೆಯಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ.ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ವೈದ್ಯಕೀಯ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ರೇಖಾ ಗುರುಮೂರ್ತಿ, ನರರೋಗ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಎಸ್.ಶ್ರೀಧರ್, ವೈದ್ಯಕೀಯ ಅಧೀಕ್ಷಕ ಡಾ.ಮೋಹನ್‌ಕುಮಾರ್ ಉಪಸ್ಥಿತರಿದ್ದರು.

## ಬಾಧಿತರ ನೆರವಿಗೆ ಬರುವುದು ನಮ್ಮ ಕರ್ತವ್ಯ

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡುತ್ತಾ "ಮೂರ್ಛೆರೋಗ ಮೂಲತಃ ನರರೋಗಕ್ಷೇತ್ರಕ್ಕೆ ಸಂಬಂಧಪಟ್ಟ ಕಾಯಿಲೆ. ಇದು ಹಲವಾರು ಕಾರಣಗಳಿಂದ ಸಂಭವಿಸಬಹುದು ಅವುಗಳೆಂದರೆ, ಮಿದುಳಿನಲ್ಲಿ ಗೆಡ್ಡೆ ಬೆಳೆಯುವುದು, ತಲೆಗೆ ಪೆಟ್ಟುಬೀಳುವುದು, ಮೆನ್ಯೆಂಜಿಟೀಸ್, ಸೋಂಕು, ಇತ್ಯಾದಿ. ಇವುಗಳಿಂದ ಮಿದುಳಿನಲ್ಲಿ ವಿದ್ಯುತ್ತಿನ ಸಹಜ ಸಂಪರ್ಕಕ್ಕೆ ತೊಂದರೆಯಾಗಬಹುದು ಅಥವಾ ಮೆದುಳಿನ ಸಂಪರ್ಕಜಾಲದಲ್ಲಿ ಏರುಪೇರಾಗಬಹುದು. ಆಗ ವ್ಯಕ್ತಿ ಸನ್ನಿಗೆ (ಸೆಳೆತಕ್ಕೆ) ಅಥವಾ ಮೂರ್ಛೆಗೆ ಒಳಗಾಗುತ್ತಾನೆ. ಅಷ್ಟೇ ಅಲ್ಲದೆ, ಮೂರ್ಛೆರೋಗದಿಂದ ಬಾಧಿತನಾದ ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆಯಾಗುತ್ತದೆ ಮತ್ತು ಇದು ಸಾಮಾಜಿಕ ಸಮಸ್ಯೆಗೂ ಎಡೆಮಾಡಿಕೊಡಬಹುದು. ಆದುದರಿಂದ ಈ ಸಮಸ್ಯೆಯನ್ನು ವೈದ್ಯಶಾಸ್ತ್ರದ ವಿವಿಧ ಅಧ್ಯಯನ ಕ್ಷೇತ್ರಗಳ ಪರಿಧಿಯಲ್ಲಿ ವಿವೇಚನೆ ಮಾಡಬೇಕು. ಸಮಾಧಾನದ ವಿಚಾರವೆಂದರೆ ಮೂರ್ಛೆರೋಗಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಸಂಶೋಧನೆಗಳು ನಡೆದಿವೆ. ಅದರ ಫಲಗಳನ್ನು ಈಗ ಈ ರೋಗದಿಂದ ಬಾಧಿತರಾದವರು ಪಡೆಯುತ್ತಿದ್ದಾರೆ. ಮೂರ್ಛೆರೋಗದ ಚಿಕಿತ್ಸೆಗೆ ಹೊಸ ಹೊಸ ಔಷಧಗಳು ಮಾರುಕಟ್ಟೆಗೆ ಬಂದಿವೆ. ಇವುಗಳನ್ನು ಉಪಯೋಗಿಸಿ ಉತ್ತಮ ಚಿಕಿತ್ಸೆಕೊಡುವುದು ನಮ್ಮಜವಾಬ್ದಾರಿಯಾಗಿದೆ" ಎಂದರು.

## ಮಾನವೀಯ ನೆಲೆಯಲ್ಲಿ ಸೇವೆಯನ್ನು ಒದಗಿಸಿದ ಕೀರ್ತಿ ಶ್ರೀದೇವಿ ಆಸ್ಪತ್ರೆಯದು

"ಸಮಾಜದಿಂದ ತಾನು ಪಡೆದದ್ದಕ್ಕಿಂತ ಹೆಚ್ಚಿನದನ್ನು ಸಮಾಜಕ್ಕೆ ಕೊಟ್ಟರೆ ಮನುಷ್ಯನ ಬದುಕು ಸಾರ್ಥಕ. ಈ ನಿಟ್ಟಿನಲ್ಲಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್ ಅವರು ತಮ್ಮ ಅನನ್ಯ ವೈದ್ಯಕೀಯ ಸೇವೆಯ ಮೂಲಕ ಸಮಾಜದಿಂದ ಗಳಿಸಿದ್ದಕ್ಕಿಂತ ಹೆಚ್ಚಿನದನ್ನು ಕೊಟ್ಟಿದ್ದಾರೆ ಎಂದರೆ ಅತಿಶೋಕ್ತಿಯಲ್ಲ! 90ರ ದಶಕದಲ್ಲಿಯೇ ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯಲ್ಲಿ ಸಿಟಿಸ್ಕ್ಯಾನ್ ಅಳವಡಿಸುವ ಮೂಲಕ ವೈದ್ಯಲೋಕದ ಅಗತ್ಯಗಳನ್ನು ಪೂರೈಸಿ, ವೈದ್ಯಕೀಯ ಕ್ಷೇತ್ರದಲ್ಲಿ ಅಳಿಸಲಾಗದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಸಾಮಾನ್ಯ ಕುಟುಂಬದಲ್ಲಿ ಜನಿಸಿ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಿ ಬೇರೆಯವರಿಗೆ ಮಾದರಿಯಾಗಿದ್ದಾರೆ. ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವುದುಕೇವಲ ಸರ್ಕಾರದ ಹೊಣೆ ಮಾತ್ರವಲ್ಲ ಅದರ ಜೊತೆಗೆ ಖಾಸಗಿ ವಲಯ ಕೈಗೊಡಿಸಿದಾಗಲೇ ಪರಿಣಾಮಕಾರಿ ಆರೋಗ್ಯಸೇವೆ ಒದಗಿಸಲು ಸಾಧ್ಯ ಎಂಬ ತತ್ತ್ವದಲ್ಲಿ ಅಚಲ ನಂಬಿಕೆಯನ್ನಿಟ್ಟುಕೊಂಡು ಸಮುದಾಯದಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಜೊತೆಗೆ ಶ್ರೀದೇವಿ ಆಸ್ಪತ್ರೆಯಲ್ಲಿ ಆಧುನಿಕ, ಸುಸಜ್ಜಿತ ಸೌಲಭ್ಯಗಳನ್ನು ವ್ಯವಸ್ಥೆಮಾಡಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ."

– ಡಾ. ಎಂ.ಟಿ. ಸತ್ಯನಾರಾಯಣ
ಮನೋವೈದ್ಯರು, ತುಮಕೂರು

# ಬೆಂಗಳೂರಿನ ಟೆಕ್ ಮೇಳದಲ್ಲಿ ತಾಂತ್ರಿಕ ಮಾಯೆ!

▶▶ ಮೊದಲನೇ ಪುಟದಿಂದ

ಈ ಯೋಜನೆಯ ಅಡಿಯಲ್ಲಿ ಒಂದು ವರ್ಷದಲ್ಲಿ ಒಂದು ಲಕ್ಷ ಜನರಿಗೆ ಕೌಶಲ ತರಬೇತಿ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿದ್ದು, ಇದಕ್ಕಾಗಿ ಮೈಕ್ರೋಸಾಫ್ಟ್, ಇಂಟೆಲ್, ಆಕ್ಸೆಂಚರ್, ಐಬಿಎಂ, ಬಿಎಫ್‌ಎಸ್‌ಐಕನ್ಸಾರ್ಷಿಯಂ – ಈ ಐದು ಸಂಸ್ಥೆಗಳ ಜೊತೆ ಒಡಂಬಡಿಕೆಗಳಿಗೆ (ಎಂಒಯು) ಸಮಾವೇಶದಲ್ಲಿ ಸಹಿ ಹಾಕಲಾಯಿತು.

ಇನ್ನು, ಸಮಾವೇಶದಲ್ಲಿ ಅನಾವರಣಗೊಂಡ ಮಹತ್ವದ ಕರಡು ಬಾಹ್ಯಾಕಾಶಕರಡು ನೀತಿ 2024–29ರಲ್ಲಿ ದೇಶದ ಬಾಹ್ಯಾಕಾಶ ವಲಯದ ವಹಿವಾಟಿನಕನಿಷ್ಠ ಶೇಕಡಾ 50ರಷ್ಟು ಕರ್ನಾಟಕದ್ದಾಗಿರಬೇಕೆಂಬ ಗುರಿಗೆ ಒತ್ತು ಕೊಡಲಾಗಿದೆ. ಇದೇ ವೇಳೆ, 44 ಶತಕೋಟಿ ಡಾಲರ್‌ಗಳ ಜಾಗತಿಕ ವಹಿವಾಟಿನಲ್ಲಿ ಶೇ. 5ರಷ್ಟನ್ನು ರಾಜ್ಯದ ಪಾಲಾಗಿಸಿಕೊಳ್ಳಬೇಕೆಂಬ ಗುರಿಯೊಂದಿಗೆ ಇದನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಪ್ರಾಯೋಗಿಕ ತರಬೇತಿ, ಎಂಜಿನಿಯರಿಂಗ್ ಮತ್ತು ವಿಜ್ಞಾನ ಪದವಿ ಹಂತದಲ್ಲೇ ಬಾಹ್ಯಾಕಾಶ ಸಂಶೋಧನೆಗೆ ಪ್ರತ್ಯೇಕ ಕೋರ್ಸುಗಳ ಅಳವಡಿಕೆ, ಇಸ್ರೊ ಸಹಯೋಗದಲ್ಲಿ ಕೌಶಲ ತರಬೇತಿಕೋರ್ಸ್ ರೂಪಿಸುವಿಕೆ, 1,500 ಯುವತಿಯರು ಒಳಗೊಂಡಂತೆ 5,000 ಜನರಿಗೆ ತರಬೇತಿಯನ್ನು ನೀಡುವುದು ಹಾಗೂ ಈ ವಲಯಕ್ಕೆ 3ಶತಕೋಟಿ ಡಾಲರ್ ಹೂಡಿಕೆಯನ್ನು ಆಕರ್ಷಿಸುವ ಪ್ರಸ್ತಾವಗಳು ಇದರಲ್ಲಿ ಸೇರಿವೆ. ಬಾಹ್ಯಾಕಾಶ ನೌಕೆಗಳು, ಎಂಜಿನ್‌ಗಳು, ಉಪಗ್ರಹಗಳ ಅಭಿವೃದ್ಧಿಗೆ ಅಗತ್ಯವಾದ ಮೂಲಸೌಕರ್ಯ ಸ್ಥಾಪನೆಗೆ ಸರ್ಕಾರ ಗಮನ ಕೇಂದ್ರೀಕರಿಸಲಿದೆ.

ಇಸ್ರೊ ಅಧ್ಯಕ್ಷರಾದ ಡಾ. ಎಸ್.ಸೋಮನಾಥ್ ಅವರು ಸಮಾವೇಶದ ಗೋಷ್ಠಿಯಲ್ಲಿ ಮಾತನಾಡಿ, ರಾಕೆಟ್ ಸೆನ್ಸರ್‌ಗಳ ತಯಾರಿಕೆಯಲ್ಲಿ ಪರಿಣತಿ ಪಡೆದಿರುವ ತಮ್ಮ ಸಂಸ್ಥೆಯು ಕಾರುಗಳ ಸೆನ್ಸರ್‌ಗಳ ದೇಶೀಯ ತಯಾರಿಕೆಯಲ್ಲಿ ಭಾಗಿಯಾಗಲು ಉತ್ಸುಕವಾಗಿರುವುದಾಗಿ ಪ್ರಕಟಿಸಿದುದು ಗಮನಾರ್ಹ ಅಂಶ. ಹಾಗೆಯೇ, ಎಸಿಎಸ್ ಹಾಗೂ ಅಭಿವೃದ್ಧಿ ಆಯುಕ್ತರಾದ ಉಮಾ ಮಹಾದೇವನ್‌ಅವರು ಡಿಜಿಟಲೀಕರಣದಲ್ಲಿ ಆಗುತ್ತಿರುವ ಅಭಿವೃದ್ಧಿಯಿಂದಾಗಿ ಸ್ಥಳೀಯ ಪಂಚಾಯತಿಗಳ ಕಲಾಪಗಳ ನೇರ ಪ್ರಸಾರ ಸದ್ಯದಲ್ಲೇ ಕಾರ್ಯರೂಪಕ್ಕೆ ಬರಲಿದೆ ಎಂದಿರುವುದು ಗ್ರಾಮೀಣಾಭಿವೃದ್ಧಿಗೆ ಬಲ ತುಂಬುವ ಆಶಾಭಾವನೆಯನ್ನು ಮೂಡಿಸಿದೆ.

ವಿವಿಧ ಸ್ಟಾರ್ಟಪ್‌ಗಳು ಅಭಿವೃದ್ಧಿಪಡಿಸಿರುವ 50 ಉತ್ಪನ್ನಗಳು ಸಮಾವೇಶದಲ್ಲಿ ಲೋಕಾರ್ಪಣೆಗೊಂಡವು. ಐಟಿ/ಐಟಿಇಎಸ್, ಅಗ್ರಿ–ಟೆಕ್, ಮೆಡ್–ಟೆಕ್, ಹೆಲ್ತ್‌ಕೇರ್, ಕ್ಲೀನ್–ಟೆಕ್, ಎಐ, ಡೀಪ್‌ಟೆಕ್ ಹೀಗೆ ವಿಭಿನ್ನ ಕ್ಷೇತ್ರಗಳಿಗೆ ಸಂಬಂಧಿಸಿದ ಈ ಉತ್ಪನ್ನಗಳು ರಾಜ್ಯದಲ್ಲಿ ಕಾರ್ಯಾಚರಣೆಯನ್ನು ನಡೆಸುತ್ತಿರುವ ಸ್ಟಾರ್ಟಪ್‌ಗಳ ಕ್ರಿಯಾಶೀಲತೆಯನ್ನು ಬಿಂಬಿಸಿದವು.

ಜಾಗತಿಕ ಮಟ್ಟದಲ್ಲಿ ತಾಂತ್ರಿಕತೆಯಲ್ಲಿ ಆಗುತ್ತಿರುವ ಪ್ರಗತಿ, ಮುಂಬರುವ ದಿನಗಳಲ್ಲಿ ಹೂಡಿಕೆಯ ಗತಿ, ಉದ್ಯೋಗಾವಕಾಶಗಳ ಸ್ವರೂಪ, ಉದ್ದಿಮೆಗಳು ನಿರೀಕ್ಷಿಸುವ ಕೌಶಲಗಳು, ಪ್ರವರ್ಧಮಾನಕ್ಕೆ ಬರಲಿರುವ ವಲಯಗಳು, ಅದಕ್ಕೆ ಪೂರಕವಾಗಿ ರಾಜ್ಯದಲ್ಲಿರುವ ಕೈಗಾರಿಕಾ ಪರಿಸರ ಹಾಗೂ ಮಾಡಿಕೊಳ್ಳಬೇಕಾದ ಮುಂದಿನ ಸಿದ್ಧತೆ ಇವುಗಳ ಬಗೆಗೆ ಪ್ರಮುಖ ಸುಳಿವುಗಳನ್ನು ನೀಡಿದ ಸಮ್ಮೇಳನಕ್ಕೆ, ಸುಮಾರು 37,000 ಜನರು ಖುದ್ದು ಭೇಟಿ ನೀಡಿ ವೀಕ್ಷಿಸಿದರು.



## ಗಾಳಿಯಲ್ಲಿ ಹಾರಿಬಂದ ಜೆಟ್ ಸೂಟ್‌ಧಾರಿ

**ಈ ಬಾರಿಯ ಟೆಕ್ ಶೃಂಗವು ತಂತ್ರಜ್ಞಾನದ ಮೇಳಕ್ಕೆ ಒಪ್ಪುವ ರೀತಿಯಲ್ಲಿ ಚಾಲನೆ ಪಡೆದು ಎಲ್ಲರ ಗಮನ ಸೆಳೆಯಿತು. ಜೆಟ್ ಸೂಟನ್ನು ಧರಿಸಿದ ಯುವಕ ಗಾಳಿಯಲ್ಲಿ ಹಾರುತ್ತಾ ಬಂದು ಅರಮನೆ ಮೈದಾನದಲ್ಲಿ ಇಳಿದು ತನ್ನೊಂದಿಗಿದ್ದ ಪೆಟ್ಟಿಗೆಯಲ್ಲಿದ್ದ ಕತ್ತರಿಯನ್ನು ಉದ್ಘಾಟನಾ ರಿಬ್ಬನ್ ಕತ್ತರಿಸಲು ಮುಖ್ಯಮಂತ್ರಿಯವರಿಗೆ ನೀಡಿದರು. ಗ್ರಾವಿಟಿ ಇಂಡಸ್ಟ್ರೀಸ್ ಎಂಬ ಕಂಪನಿಯು ಮನುಷ್ಯರು ಧರಿಸಬಲ್ಲ ಜೆಟ್ ಎಂಜಿನ್ ಸಂಯೋಜನೆಯ ಈ ಸೂಟನ್ನು ಅಭಿವೃದ್ಧಿಪಡಿಸಿದೆ. ಐದು ಗ್ಯಾಸ್ ಟರ್ಬೈನ್‌ಗಳನ್ನು ಇದು ಹೊಂದಿದ್ದು, ಎರಡೂ ತೋಳುಗಳಿಗೆ ತಲಾ ಒಂದು ಜೊತೆ ಟರ್ಬೈನ್ ಅಳವಡಿಸಲಾಗಿರುತ್ತದೆ. ಉಳಿದೊಂದು ಜೊತೆ ಟರ್ಬೈನ್‌ಅನ್ನು ಬೆನ್ನಿಗೆ ಅಳವಡಿಸಲಾಗಿರುತ್ತದೆ. ಈ ಟರ್ಬೈನ್‌ಗಳು ವ್ಯಕ್ತಿಯನ್ನು ಗಾಳಿಯಲ್ಲಿ ಹಾರಿಸಲು ಬೇಕಾದ ನೂಕು ಬಲವನ್ನು ಒದಗಿಸುತ್ತವೆ. ಇದನ್ನು ಧರಿಸಿದ ವ್ಯಕ್ತಿಯು ಹಾರಾಟವನ್ನು ಸ್ವತಃ ನಿಯಂತ್ರಿಸುತ್ತಾ ಗಂಟೆಗೆ 140 ಕಿ.ಮೀ. ವೇಗದಲ್ಲಿ ಗರಿಷ್ಠ 12,000 ಅಡಿ ಎತ್ತರದಲ್ಲಿ ಹಾರಿ ನಿಗದಿತ ಸ್ಥಳ ತಲುಪಬಹುದು.**

## ಗಮನಸೆಳೆದ ವಸ್ತು ಪ್ರದರ್ಶನ




**ಸ್ಮಾರ್ಟ್‌ಕೀಬೋರ್ಡ್:**
ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಸಂಸ್ಕೃತ, ಇಂಗ್ಲಿಷ್ ಸೇರಿದಂತೆ ಹತ್ತು ಭಾಷೆಗಳಲ್ಲಿ ಟೈಪ್‌ಮಾಡಲು ಅನುವು ಮಾಡಿಕೊಡುವ ಸ್ಮಾರ್ಟ್‌ಕೀಬೋರ್ಡನ್ನು ಕ–ನಾಡ ಎಂಬ ಕಂಪನಿ ಅಭಿವೃದ್ಧಿ ಪಡಿಸಿದೆ. ಕಂಪನಿಯು ತನ್ನ ಈ ಕೀಬೋರ್ಡ್ ಲೇಔಟ್ ವಿನ್ಯಾಸಕ್ಕೆ ಪೇಟೆಂಟನ್ನೂ ಪಡೆದಿದೆ. ಇದು ಡಿಜಿಟಲ್ ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಡುವ ಜೊತೆಗೆ, ಅವಕಾಶ, ಸಂಪರ್ಕ ಹಾಗೂ ಡಿಜಿಟಲ್ ಸಬಲೀಕರಣಕ್ಕೆ ಹೊಸ ಬಾಗಿಲನ್ನು ತೆರೆಯುತ್ತದೆ ಎಂಬುದು ಪ್ರವರ್ತಕರ ಅಭಿಮತ.

**ಕಟ್ಟಡದ ಸದೃಢತೆ ಅಳೆಯಲು ರಿಮೋಟ್‌ಟೂಲ್:**
ಕಟ್ಟಡದ ಸದೃಢತೆಯನ್ನು ಪರೀಕ್ಷಿಸಲು 'ಸ್ಟ್ರಕ್ಚರಲ್ ಹೆಲ್ತ್ ಮಾನಿಟರಿಂಗ್‌ಟೂಲ್' ಅನ್ನು ವಿಶಾಖಪಟ್ಟಣದ ಅಕ್ಷಯ ಇನ್ನೋಟೆಕ್ ಕಂಪನಿ ಅಭಿವೃದ್ಧಿಪಡಿಸಿದೆ. ಇದನ್ನು ಬಳಸಿ ಅಣೆಕಟ್ಟು, ಶಾಖೋತ್ಪನ್ನಕೇಂದ್ರ, ಪರಮಾಣು ಇಂಧನ ಘಟಕ ಸೇರಿದಂತೆ ಯಾವುದೇ ಕಟ್ಟಡದ ಸದೃಢತೆ ಪರೀಕ್ಷಿಸಬಹುದು. ಅತ್ಯಾಧುನಿಕ ಕ್ಯಾಮೆರಾ, ಮಷೀನ್ ಲರ್ನಿಂಗ್ ಮತ್ತು ಎಐ ಬಳಸಿದ ತಾಂತ್ರಿಕತೆಯನ್ನು ಇದು ಆಧರಿಸಿದೆ. ಮಲ್ಟಿಸ್ಪೆಷಿಯಲ್ ಕ್ಯಾಮೆರಾ ಮತ್ತು ಸೆನ್ಸರ್‌ಗಳನ್ನು ಬಳಸಿ ಡ್ರೋನ್ ಮೂಲಕ ಪ್ರತಿಯೊಂದು ಕೋನದಿಂದ ಕಟ್ಟಡದ ಚಿತ್ರವನ್ನು ತೆಗೆದು ಆ ಕಟ್ಟಡದ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ಅನಂತರ ಸಂಬಂಧಿಸಿದ ಸಾಫ್ಟ್‌ವೇರ್ ಈ ದತ್ತಾಂಶದ ವಿಶ್ಲೇಷಣೆ ನಡೆಸುತ್ತದೆ. ಕಟ್ಟಡವು ಎಷ್ಟರಮಟ್ಟಿಗೆ ಕಂಪನವನ್ನು ತಡೆದುಕೊಳ್ಳಬಲ್ಲದು, ಕಟ್ಟಡದ ಯಾವ ಭಾಗ ದುರ್ಬಲವಾಗಿದೆ ಎಂಬುದನ್ನು ಇದು ಸ್ಪಷ್ಟವಾಗಿ ತಿಳಿಸುತ್ತದೆ. ಯಾವುದೇ ಶಿಥಿಲ ಕಟ್ಟಡ ಕುಸಿಯುವ ಸಂಭವವಿದ್ದರೆ ಅದರ ಬಗೆಗೆ 2ಗಂಟೆ ಮುಂಚಿತವಾಗಿಯೇ ನಿಖರ ಮಾಹಿತಿಯನ್ನು ಇದು ನೀಡಬಲ್ಲದು ಎನ್ನುತ್ತಾರೆ ಕಂಪನಿಯವರು.

**ಭಾರವಸ್ತು ಸ್ಥಳಾಂತರಿಸಲು ಟ್ರಾಲಿ:**
ಕಟ್ಟಡಗಳ ನಿರ್ಮಾಣ, ಫ್ಯಾಕ್ಟರಿ, ಕೃಷಿ ಹಾಗೂ ಮತ್ತಿತರ ಕೆಲಸಗಳಿಗೆ ಬಳಕೆ ಮಾಡಬಹುದಾದ ಫ್ಲೋಹೌಲರ್ ಎಂಬ ಟ್ರಾಲಿಯನ್ನು ಫ್ಲೋಮೊಬಿಲಿಟಿ ಕಂಪನಿ ಅಭಿವೃದ್ಧಿಪಡಿಸಿದೆ. ಅಪಾರ್ಟ್‌ಮೆಂಟುಗಳು ಮತ್ತು ದೊಡ್ಡ ಕಟ್ಟಡಗಳ ನಿರ್ಮಾಣದ ವೇಳೆ ಎದುರಾಗಬಹುದಾದ ಕಾರ್ಮಿಕರ ಕೊರತೆಯನ್ನು ನಿವಾರಿಸಿಕೊಳ್ಳಲು ಕೂಡ ಇದನ್ನು ಬಳಸಬಹುದು. ಇದರಲ್ಲಿ ಇಟ್ಟಿಗೆ, ಮರಳು, ಅಥವಾ ಜಲ್ಲಿಯನ್ನು ತುಂಬಿ ಗರಿಷ್ಠ 100 ಮೀಟರುಗಳವರೆಗಿನ ಎತ್ತರದ ಫ್ಲೋರುಗಳಿಗೆ ಕಳಿಸಬಹುದು. ಸಂಸ್ಥೆಯ ಪ್ರಕಾರ, ಇದು 500 ಕೆಜಿವರೆಗೆ ಭಾರ ಒಯ್ಯುವ ಸಾಮರ್ಥ್ಯವನ್ನು ಹೊಂದಿದೆ.

**ಸ್ಮಾರ್ಟ್‌ಕೃಷಿಗೆ 'ಆಟೋಗ್ರೊ':**
ಸ್ಮಾರ್ಟ್‌ಕೃಷಿ ಮಾಡಲು "ಆಟೋಗ್ರೊ"ವನ್ನು ಬೆಂಗಳೂರಿನ ಐಐಐಟಿಬಿ ಎಂಬ ಸಂಸ್ಥೆ ಅಭಿವೃದ್ಧಿಪಡಿಸಿದೆ. ಕಡಿಮೆ ವಿಸ್ತೀರ್ಣದ ಜಾಗಗಳಲ್ಲಿ ಹಾಗೂ ತಾರಸಿಗಳ ಮೇಲೆ ಸೊಪ್ಪು, ತರಕಾರಿ ಬೆಳೆಯಲು ಇದು ನೆರವಾಗಲಿದೆ. ಇದು ಸೆನ್ಸರ್ ಸಹಾಯದಿಂದ ಸಸ್ಯಗಳಲ್ಲಿನ ಪೌಷ್ಟಿಕತೆಯ ಮಾಪನ ಮಾಡಿ, ಅಗತ್ಯಕ್ಕೆ ತಕ್ಕಂತೆ ನೀರು ಹಾಗೂ ಇನ್ನಿತರ ಪೋಷಕಾಂಶ ಉಣಿಸಲು ಸಹಕಾರಿ ಎನ್ನುವುದು ಕಂಪನಿಯ ವಿವರಣೆ.

**ಸ್ಮಾರ್ಟ್ ಲಾಕರ್:**
ಡೆಲಿಬೊ ಎಂಬ ಕಂಪನಿ ಒಟಿಪಿ ಆಧಾರಿತ ಸ್ಮಾರ್ಟ್ ಲಾಕರನ್ನು ಅಭಿವೃದ್ಧಿಪಡಿಸಿದೆ. ಗೇಟೆಡ್ ಕಮ್ಯುನಿಟಿ, ಬ್ಯುಸಿನೆಸ್ ಟೆಕ್‌ಪಾರ್ಕ್, ಕೋ–ಲಿವಿಂಗ್‌ಸ್ಪೇಸ್, ಹಾಸ್ಟೆಲ್, ಸಾರ್ವಜನಿಕ ಸ್ಥಳಗಳಲ್ಲಿನ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಇದನ್ನು ರೂಪಿಸಲಾಗಿದೆ.

**ಸುಲಭವಾಗಿ ಕರಗುವ ಸ್ಯಾನಿಟರಿ ಪ್ಯಾಡ್:**
ಪರಿಸರ ಮತ್ತು ಸುಸ್ಥಿರತೆ ಕ್ಷೇತ್ರದಲ್ಲಿ ಸಂಶೋಧನೆಯಲ್ಲಿ ತೊಡಗಿರುವ 'ಅರಾಬಯೊ' ಎಂಬ ಸ್ಟಾರ್ಟಪ್ ಬಹು ಸುಲಭವಾಗಿಕರಗಬಲ್ಲ/ಕೊಳೆಯಬಲ್ಲ (ಬಯೊಡಿಗ್ರೇಡಬಲ್) ಸ್ಯಾನಿಟರಿ ಪ್ಯಾಡನ್ನು ಅಭಿವೃದ್ಧಿಪಡಿಸಿದೆ. ಕಂಪನಿಯ ಉನ್ನತಾಧಿಕಾರಿಗಳು ಹೇಳುವಂತೆ, ಸ್ಯಾನಿಟರಿ ಪ್ಯಾಡ್‌ಗಳನ್ನು ಕಸಕ್ಕೆ ಹಾಕುವ ಪದ್ಧತಿಯನ್ನು ಇದು ತೊಡೆದು ಹಾಕಲಿದೆ. ಕಂಪನಿಯು ಇದನ್ನು ಸಾಧ್ಯವಾದಷ್ಟು ಶೀಘ್ರ ಮಾರುಕಟ್ಟೆಗೆ ಬಿಡುಗಡೆಗೊಳಿಸುವ ಬಗ್ಗೆಗಮನ ಕೇಂದ್ರೀಕರಿಸಿದೆ.

**ಜಾನುವಾರುಗಳ ರೋಗಪತ್ತೆಗೆ ಎಐ ಚಾಟ್ ಬಾಟ್:**
ಮನೆಯಲ್ಲಿರುವ ನಾಯಿ, ಬೆಕ್ಕು ಸೇರಿದಂತೆ ಸಾಕು ಪ್ರಾಣಿಗಳಿಗಾಗಿಯೇ ಕೃತಕ ಬುದ್ಧಿಮತ್ತೆಯ ಚಾಟ್‌ಬಾಟ್ ಅಭಿವೃದ್ಧಿಪಡಿಸಲಾಗಿದೆ. ಸಾಕುಪ್ರಾಣಿಗಳು ಅಥವಾ ಜಾನುವಾರುಗಳು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಯ ಲಕ್ಷಣಗಳನ್ನು ಹೇಳಿದರೆ, ಈ ಚಾಟ್ ಬಾಟ್ ಕ್ಷಣಾರ್ಧದಲ್ಲಿ ರೋಗ ಪತ್ತೆ ಮಾಡಿ ಮಾಹಿತಿ ನೀಡುತ್ತದೆ. ಎಕ್ಸ್–ರೇ ಅಥವಾ ಸ್ಕ್ಯಾನಿಂಗ್ ವರದಿ ಅಪ್‌ಲೋಡ್ ಮಾಡಿದರೆ, ಆ ಜಾನುವಾರು ಅಥವಾ ಸಾಕುಪ್ರಾಣಿಗೆ ಇಂತಹದ್ದೇ ಕಾಯಿಲೆಇದೆ ಎಂದು ಇದು ಹೇಳಬಲ್ಲದು. ಜಾನುವಾರುಗಳಿಗಾಗಿಯೇ ಎಐಚಾಟ್ ಬಾಟ್ ಪರಿಚಯಿಸಿರುವುದು ಇದೇ ಮೊದಲು ಎನ್ನುತ್ತಾರೆ ಟ್ರೆಲ್ ಮಾರ್ಟ್‌ಕಂಪನಿಯವರು.

**ಲಸಿಕೆ ಯೋಗ್ಯತೆ ತಿಳಿಸುವ ಮಾನಿಟರಿಂಗ್ ಸಿಸ್ಟಂ:**
ಲಸಿಕೆ ಸಂಗ್ರಾಹಕಗಳಲ್ಲಿ ನಿರಂತರವಾಗಿ ನಿರ್ದಿಷ್ಟ ಉಷ್ಣತೆ ಕಾಪಾಡಿಕೊಳ್ಳುವುದು ಸವಾಲಿನ ಸಂಗತಿ. ಲಸಿಕೆ ಸಂಗ್ರಾಹಕದಲ್ಲಿನ ಉಷ್ಣತೆ ಏರುಪೇರಾದರೆ ಆ ವ್ಯಾಕ್ಸಿನ್ ನಿರುಪಯುಕ್ತವಾಗುವ ಸಾಧ್ಯತೆಯೇ ಹೆಚ್ಚು. ಈ ಸಮಸ್ಯೆಯನ್ನು ಪರಿಹರಿಸಲು ರಾಜೇಶ್ ಲ್ಯಾಬೊರೇಟರೀಸ್ ಎಂಬ ಕಂಪನಿಯು 'ನಾವೆಲ್ ಸ್ಮಾರ್ಟ್ ವ್ಯಾಕ್ಸಿನ್ ವಯಲ್ ಮಾನಿಟರಿಂಗ್ ಸಿಸ್ಟಂ' ಎಂಬ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ. ಸಂಗ್ರಾಹಕದಲ್ಲಿ ಇರಿಸಲಾದ ಲಸಿಕೆಯು ಬಳಕೆಗೆ ಯೋಗ್ಯವಲ್ಲವೆಂದಾದರೆ ತಕ್ಷಣವೇ ಸಂಗ್ರಾಹಕದಲ್ಲಿ ಇರುವ ಕೆಂಪು ದೀಪವು ಸೂಚನೆಯನ್ನು ನೀಡುತ್ತದೆ.

**ಮಣ್ಣು ಪರೀಕ್ಷೆಗೆ 'ಅಗ್ರಿಸೆನ್ಸ್':**
ತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ರಿಮೋಟ್ ನಿಯಂತ್ರಿತ ಕಸದಬುಟ್ಟಿ, ಸ್ವತಃ ರೈತರೇ ಮಣ್ಣಿನ ಪರೀಕ್ಷೆ ಮಾಡಬಹುದಾದ 'ಅಗ್ರಿಸೆನ್ಸ್', ಲಕ್ವ ಬಾಧಿತರಿಗೆ ರಿಹ್ಯಾಬ್ ವೀಲ್‌ಚೇರ್, ಕೆರೆಗಳ ಮಾಲಿನ್ಯ ನಿವಾರಣೆಗೆ 'ಜಲ್‌ದೋಸ್ತ್', ಪರಿಸರಸ್ನೇಹಿ ಡಿಟರ್ಜೆಂಟ್ ಹೀಗೆ ಹಲವಾರು ಉತ್ಪನ್ನಗಳು ವೀಕ್ಷಕರ ಗಮನವನ್ನು ಸೆಳೆದವು.

# ಶ್ರೀಉತ್ಸವದಲ್ಲಿ ಮಿನುಗಿದ ರಿಯಲ್ ಹೀರೋಗಳು

■ ಕೆ.ಎಸ್. ರಾಜಮನ್ನಾರ್



ರಂಗೋಲಿ ಚಿತ್ತಾರ ಬಿಡಿಸಿದ ವೇದಿಕೆ. ಮದುವೆ ಮನೆಯನ್ನು ಮೀರಿಸುವ ಸಂಭ್ರಮ, ಮಳೆ ನಿಂತ ಮೇಲೆ ಆಗಸದಲ್ಲಿ ಮೂಡುವ ಏಳು ಬಣ್ಣಗಳ ಕಾಮನಬಿಲ್ಲು, ಅದನ್ನು ನೋಡಿದ ಮಕ್ಕಳಲ್ಲಿ ಕಂಡು ಬರುವ ಸಂತೋಷದ ವಾತಾವರಣ ಅಲ್ಲಿ ಇತ್ತು. ವಿವಿಧ ವಯೋಮಾನದವರು ವೇದಿಕೆಯ ಮೇಲೆ ಆಸೀನರಾಗಿದ್ದರು. ಆದರೆಅವರೆಲ್ಲರೂ ಸಿನಿಮಾ ಹಿರೋಗಳಲ್ಲ! ಸಮಾಜದಲ್ಲಿ ಅದ್ವಿತೀಯ ಸಾಧನೆಗೈದ ರಿಯಲ್ ಹೀರೋಗಳು.

ವೇದಿಕೆ ಮೇಲೆ ಸಿನಿಮಾ ಹಾಡು, ಭರತನಾಟ್ಯ, ಮಲೆಮಾದೇಶ್ವರ ಸ್ವಾಮಿಗೆ ಉಘೆ, ಉಘೆ ಎನ್ನುವ ಜಾನಪದ ಗೀತೆಗಳ ಝಲಕ್ ಇವು ಸಭಿಕರಿಗೆ ರಸದೌತಣ ನೀಡಿದವು. ಹಸಿವು ಮತ್ತು ಸಮಯವನ್ನೂ ಲೆಕ್ಕಿಸದೇ ತದೇಕ ಚಿತ್ತದಿಂದ ಕಾರ್ಯಕ್ರಮನ್ನು ಸಭಿಕರು ಕಣ್ತುಂಬಿಕೊಂಡರು ಎಂದರೆ ಆಲ್ಲಿನ ವಾತಾವರಣವು ಎಷ್ಟರಮಟ್ಟಿಗೆ ಆಕರ್ಷಣೀಯವಾಗಿತ್ತು ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದಾಗಿತ್ತು.

ಸಿನಿಮಾ ನಟ ಹಾಗೂ ಕಲಾನಿರ್ದೇಶಕಅರುಣ್ ಸಾಗರ್ ಅವರ ಮಾತು ಮತ್ತು ಭಾವಾಭಿನಯಕ್ಕೆ ಸಭಿಕರು ಮಂತ್ರಮುಗ್ಧರಾಗಿದ್ದರು. ಅಲ್ಲಿ ಒಂದು ಸೂಜಿಯು ಬಿದ್ದರೂ ಕೇಳುವಷ್ಟು ಮೌನವಿತ್ತು ಎಂದರೆ ಅವರ ಮಾತಿನ ಮೋಡಿ ಎಂತಹ ಪರಿಣಾಮ ಬೀರಿತ್ತು ನೋಡಿ! ಹಾಡು ಬಾರದವರ ಕೈಯಲ್ಲಿ ಹಾಡಿಸಿದರು. ನಟನೆ ಬಾರದವರಿಂದ ನಟನೆ ಮಾಡಿಸಿದರು. ನೃತ್ಯ ಗೊತ್ತಿಲ್ಲದವರಿಂದ ಭರತನಾಟ್ಯವನ್ನೂ ಮಾಡಿಸಿ ಎಲ್ಲರನ್ನೂ ನಿಬ್ಬೆರಗುಗೊಳಿಸಿದರು. ಇದೆಲ್ಲಾ ನಡೆದಿದ್ದು ತುಮಕೂರಿನ ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಶ್ರೀಉತ್ಸವ–2024 ಕಾರ್ಯಕ್ರಮದಲ್ಲಿ. ನವೆಂಬರ್ 15 ಮತ್ತು 16ರಂದು ಶ್ರೀದೇವಿ ಕಾಲೇಜಿನ ಸಭಾಂಗಣದಲ್ಲಿ ಈ ಉತ್ಸವ ನಡೆಯಿತು.

"ಬೆಂಗಳೂರಿನ ಅನಂತರ ತುಮಕೂರಿನಲ್ಲಿ ಐಟಿ–ಬಿಟಿಯನ್ನು ದೊಡ್ಡ ಮಟ್ಟದಲ್ಲಿ ಬೆಳೆಸುವ, ತುಮಕೂರನ್ನು ಭಾರತದ ಎರಡನೇ ಸಿಲಿಕಾನ್ ಸಿಟಿಯಾಗಿಸುವ ಎಲ್ಲ ಗುಣಲಕ್ಷಣಗಳು ಈ ಮಣ್ಣಿಗಿದೆ. ಬೆಂಗಳೂರಿಗೆ ಹತ್ತಿರವಿರುವ ಕಾರಣ ಇಂತಹ ಅವಕಾಶ ಇದಕ್ಕೆ ಒದಗಿದೆ. ಬೆಂಗಳೂರಿನ ನಂತರ ಬಹಳ ದೊಡ್ಡ ಮಟ್ಟದಲ್ಲಿ ಐಟಿ–ಬಿಟಿ ಉದ್ಯಮ ಬೆಳೆಯುವ ಮತ್ತು ಹೆಸರು ಮಾಡಬಹುದಾದ ಯಾವುದಾದರೂ ನಗರವಿದ್ದರೆ



ಅದು ತುಮಕೂರು ಮಾತ್ರ. ಅಷ್ಟರಮಟ್ಟಿಗೆ ಇಲ್ಲಿನ ಪರಿಸರ ರೂಪುಗೊಂಡಿದೆ. ಈ ನಗರ ದೇಶದ ಪ್ರತಿಷ್ಠಿತ ವಿದ್ಯಾಕೇಂದ್ರವಾಗಿಯೂ ಗುರುತಿಸಲ್ಪಟ್ಟಿದೆ. ಇಲ್ಲಿ ಉತ್ತಮ ವಾತಾವರಣವಿದೆ, ಶೈಕ್ಷಣಿಕ ಸಂಸ್ಥೆಗಳಿವೆ" ಎಂದು ಶ್ರೀಉತ್ಸವದಲ್ಲಿ ಅರುಣ್ ತುಮಕೂರನ್ನು ಪ್ರಶಂಸಿಸಿದರು.

"ದೇಶದ ಐಟಿ ವಲಯದಲ್ಲಿ ಐವತ್ತು ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳಿದ್ದು ಅವರ ಪೈಕಿ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ಜನರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನ ಅನಂತರದ ಎರಡನೆಯ ಸ್ಥಾನವನ್ನು ತುಮಕೂರು ಶೈಕ್ಷಣಿಕ ಕೇಂದ್ರವಾಗಿ ಈಗಾಗಲೇ ಪಡೆದುಕೊಂಡಿದೆ. ನವೋದ್ಯಮಗಳು ತಲೆ ಎತ್ತಲು ಬೇಕಾದ ವಾತಾವರಣ ಮತ್ತು ಮಾನವ ಸಂಪನ್ಮೂಲಗಳೂ ತುಮಕೂರು ನಗರದಲ್ಲಿ ಲಭ್ಯವಿದೆ" ಎಂದು ಶ್ರೀದೇವಿ ಸಮೂಹ ಸಂಸ್ಥೆಗಳ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕ ಎಂ.ಎಸ್. ಪಾಟೀಲ್ಅವರು ಹೇಳಿದರು.

"ಐದು ಟ್ರಿಲಿಯನ್ ಆರ್ಥಿಕ ಗುರಿಯ ಸಾಧನೆಯಲ್ಲಿ ಯುವಕರ ಪಾತ್ರ ಬಹಳವಿದೆ. ಭಾರತವು ಕೆಲವೇ ವರ್ಷಗಳಲ್ಲಿ ಜಗತ್ತಿನ ಮೂರನೇ ಆರ್ಥಿಕ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಲಿದೆ. ವಿಶ್ವೇಶ್ವರಯ್ಯ ತಾಂತ್ರಿಕ ಮತ್ತು ರಾಜೀವ್‌ಗಾಂದಿ ಆರೋಗ್ಯ ವಿಶ್ವವಿದ್ಯಾಲಯಗಳು ಏರ್ಪಡಿಸುವ ಎಲ್ಲ ಕ್ರೀಡಾಕೂಟಗಳಲ್ಲಿ ಮತ್ತು ಅಂತರವಲಯ ಹಾಗೂ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ನಮ್ಮ ವಿದ್ಯಾರ್ಥಿಗಳು ಹೆಚ್ಚಾಗಿ ಭಾಗವಹಿಸಬೇಕು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಮೂಲಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು. ಯುವಕರ ಆರೋಗ್ಯ ಕಾಪಾಡುವ 'ಫಿಟ್‌ಇಂಡಿಯಾ' ಯೋಜನೆಯು ಕೂಡ ಮುಖ್ಯವಾಗಿದೆ" ಎಂದು ಪಾಟೀಲ್ ಅವರು ಅಭಿಪ್ರಾಯಪಟ್ಟರು.

ಅಂತಾರಾಷ್ಟ್ರೀಯ ಕಬಡ್ಡಿ ಆಟಗಾರ್ತಿ ಎನ್. ಉಷಾರಾಣಿ ಅವರು ಮಾತನಾಡುತ್ತಾ "ನಾನು ಅತ್ಯಂತ ಬಡಕುಟುಂಬದಿಂದ ಬಂದವಳು. ಮೇಲಾಗಿ ಕಾಲೇಜು ಶಿಕ್ಷಣದಿಂದ ವಂಚಿತಳಾದವಳು. ಆ ಕಾರಣ ಇಂತಹ ಕಾಲೇಜಿನ ಸಮಾರಂಭದಲ್ಲಿ ಭಾಗವಹಿಸಲು ಅವಕಾಶ ದೊರಕಿರಲಿಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಯಲ್ಲಿ ಮಾಡಿದ ಸಾಧನೆಗಾಗಿ ಪೋಲಿಸ್ ಇಲಾಖೆಯಲ್ಲಿ ಉದ್ಯೋಗ ದೊರಕಿತು. ಕಾನ್ಸ್‌ಸ್ಟೇಬಲ್ ಆಗಿ ಸೇರಿ ಬಡ್ತಿ ಪಡೆದು ಸಬ್‌ಇನ್‌ಸ್ಪೆಕ್ಟರ್ ಆದೆ. ಈಗ ಕೆ.ಎ.ಎಸ್. ಅಧಿಕಾರಿಯಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಹಾಯಕ ನಿರ್ದೇಶಕಿಯ ಹುದ್ದೆಯಲ್ಲಿದ್ದೇನೆ. ಇಷ್ಟೆಲ್ಲಾ ಸಾಧನೆಗೆ ನನ್ನ ಗುರುಗಳೇ ಕಾರಣ. ಬಡತನ ಸಾಧನೆಗೆ ಅಡ್ಡಿಯಾಗಬಾರದು ಎಂಬ ಕಾರಣಕ್ಕಾಗಿ ಸ್ವಯಂ ಸಂಸ್ಥೆಯೊಂದನ್ನು ಪ್ರಾರಂಭಿಸಿ ಬಡಮಕ್ಕಳಿಗೆ ಕಬಡ್ಡಿ ತರಬೇತಿಯನ್ನು ನೀಡುತ್ತಿದ್ದೇನೆ. ಪ್ರತಿನಿತ್ಯ ಯುವಕರು ಒಂದು ಗಂಟೆ ಸಮಯವನ್ನು ಕ್ರೀಡಾ ಚಟುವಟಿಕೆಗಳಿಗೆ ಮೀಸಲಿಟ್ಟರೆ ಅವರು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ವಿದ್ಯಾರ್ಥಿಗಳು ಕಾಲೇಜಿನ ತರಗತಿಯಲ್ಲಿ ಪಾಠ ಕಲಿಯುವುದಕ್ಕೆ ಕೊಡುವಷ್ಟೇ ಮಹತ್ವವನ್ನು ಕ್ರೀಡೆಗೂ ಕೊಡಬೇಕು" ಎಂದುಹೇಳಿದರು.

"ಚದುರಂಗ ನಮ್ಮ ದೇಶದ ಆಟ. ಆದರೆ ಕಾರಣಾಂತರದಿಂದ ಬಹಳ ವರ್ಷದವರೆಗೂ ದೇಶದಲ್ಲಿ ಇದಕ್ಕೆ ಹೆಚ್ಚಿನ ಮಹತ್ವ ದೊರಕಿರಲಿಲ್ಲ. ಆ ವಿಚಾರದಲ್ಲಿ ನೋವು–ಬೇಸರವಿದೆ. ಇದರಿಂದಾಗಿ ಬೇರೆಯವರು ನಮಗೆ ಚೆಸ್‌ಆಟವನ್ನು ಹೇಳಿ ಕೊಡುವಂತಹ ಪರಿಸ್ಥಿತಿ ಬಂದಿತು. ನಮ್ಮ ಮಕ್ಕಳಲ್ಲಿ ಪ್ರತಿಭೆ ಇದೆ. ಅವರಿಗೆ ಸೂಕ್ತ ತರಬೇತಿ ಮತ್ತು ವಾತಾವರಣಗಳನ್ನು ಕಲ್ಪಿಸಿ ಕೊಟ್ಟರೆ ಉತ್ತಮ ಆಟಗಾರರನ್ನು ತಯಾರು ಮಾಡಬಹುದು. ದಿವ್ಯಾಂಗ ಮಕ್ಕಳಿಗಾಗಿ ಮೈಸೂರು ಸೇರಿದಂತೆ ರಾಜ್ಯದ ಅನೇಕ ಕಡೆಗಳಲ್ಲಿ ಚೆಸ್ ಸ್ಪರ್ಧೆಯನ್ನು ಏರ್ಪಡಿಸಿದಾಗ ಮೂರು ವರ್ಷದ ಮಕ್ಕಳಲ್ಲೂ ಇರುವ ಚೆಸ್‌ಆಟದ ಪ್ರೌಢಿಮೆ ಕಂಡು ಆಶ್ಚರ್ಯವಾಯಿತು. ಮುಂಬರುವ ವರ್ಷಗಳಲ್ಲಿ ಭಾರತ ಚೆಸ್ ಆಟದಲ್ಲಿ ಅದ್ವಿತೀಯ ಸಾಧನೆ ಮಾಡುವ ದಿನಗಳು ದೂರವಿಲ್ಲ" ಎಂದು ಕರ್ನಾಟಕರಾಜ್ಯ ಚೆಸ್ ಅಸೋಸಿಯೇಷನ್‌ನ ಅಧ್ಯಕ್ಷ ಟಿ.ಎನ್. ಮಧುಕರ ಅಭಿಪ್ರಾಯಪಟ್ಟರು.

"ವಿದ್ಯಾರ್ಥಿಗಳ ಪಾಲಿಗೆ 'ಕಾಲೇಜ್‌ಡೇ' ಮರೆಯಲಾಗದ ಘಟನೆ. ಅವರು ಇಲ್ಲಿನ ಪ್ರತಿಕ್ಷಣವನ್ನೂ ಮಗುವಿನಂತೆ ಕಳೆಯಬೇಕು, ಅನಂದಿಸಬೇಕು. ಯಾವುದೇ ಕ್ಷೇತ್ರದಲ್ಲಿ ಪರಿಪೂರ್ಣತೆಯನ್ನು ಗಳಿಸಿಕೊಂಡರೆ ಮತ್ತು ಚಲವನ್ನು ಮೈಗೂಡಿಸಿಕೊಂಡರೆ ಯಾವ ಸಾಧನೆಯನ್ನು ಬೇಕಾದರೂ ಮಾಡಬಹುದು. ಅಂತಹ ಸಾಧನೆಯನ್ನು ಮಾಡಿ ತೋರಿಸಿರುವ ಉಷಾರಾಣಿ ಹಾಗೂ ಅರುಣ್ ಸಾಗರ್‌ಅವರು ಈ ವೇದಿಕೆಯ ಮೇಲಿದ್ದಾರೆ" ಎಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ ಹುಲಿನಾಯ್ಕರ್ ಹೇಳಿದರು.

"ನಮ್ಮ ಕಾಲೇಜು ಅಂಗಳದಲ್ಲಿ ಇಂದು ಹಬ್ಬದ ವಾತಾವರಣವಿದೆ. ಇಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವಿದೆ. ಪಾಠ್ಯಕ್ರಮದ ಆಚೆಗೆ ಅಂದರೆ ಕ್ರೀಡೆಗೂ ವಿದ್ಯಾರ್ಥಿಗಳು ಗಮನವನ್ನು ಕೊಡಬೇಕು. ಇಂದು ಶೈಕ್ಷಣಿಕ ಅರ್ಹತೆಯ ಜೊತೆಗೆ ನಾಯಕತ್ವದ ಗುಣವೂ ಅವರಲ್ಲಿ ಇರಬೇಕು. ಸಾಹಸದ ಮನೋಧರ್ಮಕ್ರೀಡೆಯಿಂದ ಬೆಳೆಯುತ್ತದೆ. ನಾವು ಹೈಸ್ಕೂಲ್ ವ್ಯಾಸಂಗದ ಕಾಲದಲ್ಲಿ ಪಾಠಕ್ಕೆ ಕೊಟ್ಟ ಆದ್ಯತೆಯನ್ನು ಕ್ರೀಡೆಗೂ ಕೊಡುತ್ತಿದ್ದರು" ಎಂದು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಹೇಳಿದರು.

ಕಾಲೇಜು ಪ್ರಾಂಶುಪಾಲ ಡಾ. ನರೇಂದ್ರ ವಿಶ್ವನಾಥ್ ವಾರ್ಷಿಕ ವರದಿಯನ್ನು ಮಂಡಿಸಿ ಕಾಲೇಜಿನ ಚಟುವಟಿಕೆ ಮತ್ತು ವಿದ್ಯಾರ್ಥಿಗಳ ಸಾಧನೆಯನ್ನು ಸಭಿಕರಿಗೆ ವಿವರಿಸಿದರು.

# ನಿರಂತರ ಕಲಿಕೆಯೇ ವೈದ್ಯವೃತ್ತಿಯಲ್ಲಿನ ಯಶಸ್ಸಿನ ಗುಟ್ಟು

"ವೈದ್ಯಕೀಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ವೈದ್ಯರಿಗೆ ಈ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಯನ್ನು ಕುರಿತು ತಿಳಿದುಕೊಳ್ಳುವುದು ತುಂಬಾ ಅನಿವಾರ್ಯವಾಗಿರುತ್ತದೆ. ವೈದ್ಯಕೀಯಕ್ಷೇತ್ರಕ್ಕೆ ಪ್ರಪಂಚದೆಲ್ಲೆಡೆ ಅತ್ಯಮೂಲ್ಯವಾದ ಸ್ಥಾನವಿದೆ. ಅತ್ಯಧಿಕ ಗೌರವವಿರುವ ವೃತ್ತಿ ಎಂದರೆ ಅದು 'ವೈದ್ಯವೃತ್ತಿ'. ಶ್ವೇತ ಸಮವಸ್ತ್ರವು ವೈದ್ಯಕೀಯ ಲೋಕದ ಸಂಕೇತವಾಗಿದ್ದು, ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿಯೂ ಇದಕ್ಕೆ ಮಾನ್ಯತೆಯಿರುತ್ತದೆ. ಭಾರತೀಯ ಸಮಾಜದಲ್ಲಿ ವೈದ್ಯರಿಗೆ ಮತ್ತು ವೈದ್ಯವೃತ್ತಿಗೆ ಶ್ರೇಷ್ಠವಾದ ಸ್ಥಾನವಿದೆ"ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ 2024ರ ಡಿಸೆಂಬರ್12 ರಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ನೂತನವಾಗಿ ಪ್ರವೇಶ ಪಡೆದಿರುವ 2024–25ನೆಯ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯವೃತ್ತಿಯ ಸಂಕೇತವಾಗಿರುವ 'ಶ್ವೇತ ಸಮವಸ್ತ್ರಧಾರಣೆ'ಯ



ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನಅಧ್ಯಕ್ಷರಾದಡಾ. ಎಂ.ಆರ್. ಹುಲಿನಾಯ್ಕರ್, ಎಂ.ಎಸ್.ಪಾಟೀಲ್, ಡಾ.ಲಾವಣ್ಯ, ಡಾ.ಎಂ.ಎಲ್.ಹರೇಂದ್ರಕುಮಾರ್,ಡಾ.ಟಿ.ಜೆ.ಸತೀಶ್, ಡಾ.ಸಿ.ಶಿವಲೀಲಾ ಮತ್ತುಡಾ.ಆರತಿ.

(White Coat Ceremony) ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮಾನವ ಸಂಪನ್ಮೂಲ ಮತ್ತು ಮಾಹಿತಿತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಮಾತನಾಡಿ "ವಿದ್ಯಾರ್ಥಿಗಳು ಶ್ರಮ ಮತ್ತು ಕಲಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಶ್ರೀದೇವಿ ಆಸ್ಪತ್ರೆಯಲ್ಲಿ ಸುಸಜ್ಜಿತ ಆಸ್ಪತ್ರೆಯ ಪ್ರಯೋಗಶಾಲೆಗಳು ಲಭ್ಯವಿದ್ದು, ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಮಟ್ಟದಲ್ಲಿಉತ್ತಮ ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ" ಎಂದರು. ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ. ಎಲ್.ಹರೇಂದ್ರಕುಮಾರ್, ಜೀವರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಟಿ.ಜೆ.ಸತೀಶ್, ಅಂಗರಚನಾಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಸಿ.ಶಿವಲೀಲಾ, ಶರೀರಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಅರತಿ ಹಾಗೂ ವಿವಿಧವಿಭಾಗಗಳ ಮುಖ್ಯಸ್ಥರು ಭಾಗವಹಿಸಿದ್ದರು.

■ ವರದಿ: ಎನ್. ಆನಂದ

## ವಾರದ ಅತಿಥಿ

ಶ್ರೀದೇವಿ ಸಮೂಹ ಸಂಸ್ಥೆಗಳಲ್ಲಿ ಒಂದಾದ ಶ್ರೀದೇವಿ ವಿದ್ಯಾ ಮಂದಿರ ಶಾಲೆಯಲ್ಲಿ ದಿನಾಂಕ 13.12.2024ರಂದು ವಾರದ ಅತಿಥಿಯಾಗಿ ಟಿ.ಆರ್.ನಾರಾಯಣಪ್ಪನವರು ಆಗಮಿಸಿದ್ದರು. ಇವರು ಪ್ರಾಣಾಯಾಮ ಮತ್ತು ಧ್ಯಾನದಲ್ಲಿ ವಿಶೇಷ ಕೌಶಲ್ಯ ಪಡೆದವರು.

ಶ್ರೀದೇವಿ ವಿದ್ಯಾಮಂದಿರದ ಮಕ್ಕಳಿಗೆ ಆಂಗ್ಲಭಾಷೆಯಲ್ಲಿ ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವ ಕೌಶಲ್ಯದ ಬಗ್ಗೆ ತರಬೇತಿ ನೀಡಿದರು. ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಧ್ಯಾನ ಹಾಗೂ ಪ್ರಾಣಾಯಾಮದ ಮಹತ್ವ ತಿಳಿಸಿಕೊಟ್ಟರು. ಓದುವ ಕೌಶಲ್ಯವನ್ನು ಕುರಿತು ಮಾರ್ಗದರ್ಶನ ನೀಡಿದರು. ಶ್ರೀಯುತರು ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಾರೆ.

# ಗುಣಮಟ್ಟದ ಶಿಕ್ಷಣಕ್ಕಾಗಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿಗೆ 'ನ್ಯಾಕ್ ಎ ಗ್ರೇಡ್' ಮಾನ್ಯತೆ

▶▶ ಮೊದಲನೇ ಪುಟದಿಂದ

ಈ 'ನ್ಯಾಕ್ ಎ' ಗ್ರೇಡ್ ಸಾಧನೆಯಿಂದಾಗಿ ದೇಶದಲ್ಲಿ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಕಾಲೇಜಿಗೆ, ಬೋಧನೆಗೆ ಹಾಗೂ ಇಲ್ಲಿ ಕಲಿಸುವ ಸಾಮರ್ಥ್ಯಕ್ಕೆ ವಿಶೇಷ ಮಾನ್ಯತೆ ಹಾಗೂ ಗೌರವ ದೊರೆಯಲಿದೆ. ಪರಿಣಾಮ, ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಉದ್ಯೋಗ ಲಭಿಸುವ ಸಾಧ್ಯತೆ ಹೆಚ್ಚಾಗಲಿದೆ. ಜೊತೆಗೆ ಉನ್ನತ ಶಿಕ್ಷಣ ಮುಂದುವರಿಸಲು ಶಿಷ್ಯವೇತನ ಹಾಗೂ ಇತರೆ ಆರ್ಥಿಕ ಸೌಲಭ್ಯಗಳೂ ದೊರೆಯಲಿದೆ. ವಿಶೇಷವಾಗಿ, ವಿದ್ಯಾರ್ಥಿಗಳಲ್ಲಿ ಕಲಿಕೆ, ನಿರಂತರ ಅಧ್ಯಯನ ಮತ್ತು ಸಂಶೋಧನಾ ತುಡಿತ ಹೆಚ್ಚಿಸಲುಇದು ಪ್ರೇರಣೆಯಾಗಲಿದೆ. ಅಂತಿಮವಾಗಿ, ಇದು ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡಲಿದೆ.

ನ್ಯಾಕ್ಎಂದರೇನು, ಅದರ ಪ್ರಯೋಜನಗಳೇನು, ಅದನ್ನು ಯಾರು ನಿರ್ಧರಿಸುತ್ತಾರೆ ಮಾನ್ಯತೆ ಪಡೆಯಲು ಅನುಸರಿಸಬೇಕಾದ ಕ್ರಮಗಳೇನು ಎಂಬ ವಿಷಯಗಳ ಬಗ್ಗೆ ಪ್ರಾಂಶುಪಾಲ ಪ್ರೊ. ನರೇಂದ್ರ ವಿಶ್ವನಾಥ್ ಸಂದರ್ಶನವೊಂದರಲ್ಲಿ ವಿವರಿಸಿದ್ದಾರೆ.

### ನ್ಯಾಕ್ ಎಂದರೇನು?

ನ್ಯಾಷನಲ್ ಅಸೆಸ್ಮೆಂಟ್ ಮತ್ತು ಅಕ್ರೆಡಿಟೇಶನ್ಕೌನ್ಸಿಲ್ ಎಂಬುದರ ಸಂಕ್ಷಿಪ್ತರೂಪವೇ ನ್ಯಾಕ್. ಇದುಉನ್ನತ ಶಿಕ್ಷಣ ಸಚಿವಾಲಯದಡಿ ಸ್ಥಾಪಿತವಾದ ಸ್ವತಂತ್ರ ಸಂಸ್ಥೆ.ಒಟ್ಟಾರೆ, ಶಿಕ್ಷಣದ ಗುಣಮಟ್ಟಕ್ಕೆ ಮಾನ್ಯತೆಯನ್ನು ನೀಡುವುದು ನ್ಯಾಕ್ ಮಾನ್ಯತೆಯ ಪ್ರಮುಖ ಉದ್ದೇಶ. ವಿಶ್ವವಿದ್ಯಾಲಯ ಧನಸಹಾಯಆಯೋಗವು (ಯುಜಿಸಿ) 1994ರಲ್ಲಿ 'ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ'ಯನ್ನು (ನ್ಯಾಕ್) ಸ್ಥಾಪಿಸಿತು. ಯಾವುದೇ ವಿದ್ಯಾಸಂಸ್ಥೆಯಲ್ಲಿ ಲಭ್ಯವಾಗುವ ಗುಣಮಟ್ಟದ ಶಿಕ್ಷಣ, ಸಂಶೋಧನೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೂಲಸೌಲಭ್ಯಕ್ಕೆ ನೀಡುವ ಪ್ರಾಮುಖ್ಯತೆ, ಅಲ್ಲಿನ ಪಠ್ಯಕ್ರಮ, ಬೋಧನೆ ಮತ್ತು ವಿದ್ಯಾರ್ಥಿ–ಸೇವೆ... ಈ ಮಾನದಂಡಗಳ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನ ನಡೆಯಲಿದೆ. ಇದಕ್ಕೆ ಬೇಕಾಗುವ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (ಯುಜಿಸಿ) ಒದಗಿಸುತ್ತದೆ. ಇದರ ಕೇಂದ್ರ ಕಚೇರಿ ಬೆಂಗಳೂರಿನಲ್ಲಿದೆ.

ಪ್ರಸ್ತುತ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯಲ್ಲಿ ಅಧ್ಯಕ್ಷರೂ ಮತ್ತು ಹದಿನಾಲ್ಕು ಜನ ಕಾರ್ಯಕಾರಿ ಸಮಿತಿಯ ಸದಸ್ಯರು ಇರುತ್ತಾರೆ.

ಬೇರೆಬೇರೆ ಕಾರಣಗಳಿಗಾಗಿ ಉನ್ನತಶ್ರೇಣಿ ಪಡೆಯಲು ಕಾಲೇಜುಗಳ ನಡುವೆ ಅನಾರೋಗ್ಯಕರ ಸ್ಪರ್ಧೆ, ತವಕ ಕಾಣಿಸಿಕೊಳ್ಳಬಾರದು ಎಂಬ ಕಾರಣಕ್ಕಾಗಿ ಇನ್ನು ಮುಂದೆ ಶ್ರೇಣಿ ನೀಡುವ ಸಂಪ್ರದಾಯಕ್ಕೆ ತಿಲಾಂಜಲಿ ನೀಡಿಕೇವಲ ಮಾನ್ಯತೆ ನೀಡುವುದಕ್ಕೆ ನ್ಯಾಕ್ ಆಡಳಿತ ಮಂಡಳಿ ನಿರ್ಧರಿಸಿದೆ.

### ಮೌಲ್ಯಮಾಪನದ ಮಾನದಂಡಗಳು

- ಪಠ್ಯಕ್ರಮದ ಅಂಶಗಳು
- ಬೋಧನೆ–ಕಲಿಕೆ ಮತ್ತು ಮೌಲ್ಯಮಾಪನ
- ಸಂಶೋಧನೆ, ಸಮಾಲೋಚನೆ ಮತ್ತು ವಿಸ್ತರಣೆ
- ಮೂಲಸೌಕರ್ಯ, ಸುಸಜ್ಜಿತಕಲಿಕಾ ಪ್ರಯೋಗಾಲಯ
- ವಿದ್ಯಾರ್ಥಿಗಳಿಗೆ ಲಭ್ಯವಾಗಿರುವ ಸೌಲಭ್ಯ
- ಆಡಳಿತ ಮತ್ತು ನಿರ್ವಹಣೆ
- ಕಲಿಕೆಯಲ್ಲಿ ಹೊಸತನ

### ಎಐಡಿಎಸ್ (AIDS) ಹೊಸ ಕಾರ್ಯಕ್ರಮ

ಪ್ರೊ. ನರೇಂದ್ರ ವಿಶ್ವನಾಥ್ ಅವರು ತಾವು 2019 ಆಗಸ್ಟ್‌ನಲ್ಲಿ 15ನೆಯ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡ ಅನಂತರ ಸಂಸ್ಥೆಯಲ್ಲಿ ಆದ ಬೆಳವಣಿಗೆಯನ್ನು ಕುರಿತು ಮಾಹಿತಿಯನ್ನು ಹಂಚಿಕೊಂಡಿದ್ದಾರೆ. "ಇಂಜಿನಿಯರಿಂಗ್ ಕಾಲೇಜಿಗೆ ಮಂಜೂರಾತಿ ದೊರೆತಿರುವ 350 ಸೀಟುಗಳ ಪೈಕಿ ಪ್ರವೇಶ ಪಡೆದವರ ಸಂಖ್ಯೆ ಕೇವಲ 170 ರಿಂದ 180 ಇತ್ತು. ಇದನ್ನು 300ರ ಗಡಿದಾಟಿಸಬೇಕು ಎಂದು ನಿಶ್ಚಯಿಸಿ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಆದರೆ 2020ರಲ್ಲಿ ಕೋವಿಡ್ ಹಾವಳಿಯ ಕಾರಣನಮ್ಮ ಆಕಾಂಕ್ಷೆಗಳಿಗೆ ಬಹುದೊಡ್ಡ ಪೆಟ್ಟು ಬಿದ್ದಿತು. 2021ರಲ್ಲಿ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಡೇಟಾ ಸೈನ್ಸ್ (AIDS) ಎಂಬ ಕಾರ್ಯಕ್ರಮ ರೂಪಿಸಿ ಎಲೆಕ್ಟ್ರಿಕ್, ಎಲೆಕ್ಟ್ರಾನಿಕ್ಸ್, ಮೆಕಾನಿಕಲ್ ಮತ್ತು ಸಿವಿಲ್ ವಿಭಾಗದ ಸೀಟುಗಳನ್ನು ಗಣನೀಯವಾಗಿ ಕಡಿಮೆ ಮಾಡಲಾಯಿತು. ಎಐಡಿಎಸ್‌ನಲ್ಲಿ 60 ಸೀಟು ನಿಗದಿಗೊಳಿಸಿದ್ದು ನಮ್ಮ ಸಂಸ್ಥೆಯಲ್ಲಿ ಪ್ರವೇಶಾತಿ ಸಂಖ್ಯೆ ಹೆಚ್ಚಳಕ್ಕೆ ವೇಗ ನೀಡಿತು. ಮುಂದಿನ ವರ್ಷದಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಪ್ರವೇಶದ ಸಂಖ್ಯೆ 120ಕ್ಕೆ ಹೆಚ್ಚಿಸಲಾಯಿತು. 2023ರಲ್ಲಿ ಸೆಂಟರ್ ಆಫ್ಎಕ್ಸಲೆನ್ಸ್, ಎಮರ್ಜಿಂಗ್ ಕಂಪ್ಯೂಟಿಂಗ್ ಲ್ಯಾಬ್ ಮತ್ತುಐಡಿಯಲ್ ಲ್ಯಾಬ್, 2022ರಲ್ಲಿ ಶ್ರೀಟೆಕ್ ಇನೋವೇಷನ್, ಸ್ಕಿಲ್ ಸೆಂಟರನ್ನು ಆರಂಭಮಾಡಿದ್ದು, ನಿರೀಕ್ಷಿತ ಬೆಳವಣಿಗೆಗೆ ಸಹಕಾರಿಯಾಯಿತು.

2022ರಲ್ಲಿ ನ್ಯಾಕ್ಮತ್ತುಎನ್‌ಬಿಎ ಮಾನ್ಯತೆ ಪಡೆಯಲು ಪೂರ್ವಭಾವಿಸಿದ್ಧತೆ, ಸಭೆಗಳನ್ನು ಮಾಡಲಾಯಿತು. ಕಾಲೇಜಿಗೆ, ಸಂಸ್ಥೆಗೆ ಮಾನ್ಯತೆ ದೊರಕಿದರೆ ಹೆಚ್ಚು ಅನುಕೂಲ ಎಂಬ ಕಾರಣದಿಂದ ಮೊದಲಿಗೆ ನ್ಯಾಕ್ ಮಾನ್ಯತೆ ಪಡೆಯಲು ನಿರ್ಧರಿಸಿ ಅಗತ್ಯ ಸಿದ್ಧತೆಗಳನ್ನು ಪ್ರಾರಂಭಿಸಲಾಯಿತು. ಇದಕ್ಕೆ ಪೂರಕವಾಗಿ 2022ನೆಯ ಸಾಲಿನಲ್ಲಿ 300ಕ್ಕೂ ಹೆಚ್ಚು ಪ್ರವೇಶಾತಿಯಾದುದು ನಮ್ಮ ಪ್ರಯತ್ನಕ್ಕೆ ಆನೆಬಲವನ್ನು ತಂದುಕೊಡುವುದರ ಜೊತೆಗೆ ಆತ್ಮವಿಶ್ವಾಸದ ಇಮ್ಮಡಿಗೂ ಕಾರಣವಾಯಿತು. ಸದುದ್ದೇಶವಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬ ಮನೋಬಲವನ್ನೂ ಇದು ವೃದ್ಧಿಸುವಂತೆ ಮಾಡಿತು.

ಸತತವಾಗಿಎರಡು ವರ್ಷಗಳ ಕಾಲ 300ಕ್ಕೂ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿಯಾದುದರಿಂದ ನ್ಯಾಕ್ ಮಾನ್ಯತೆ ಪಡೆಯುವ ವಿಶ್ವಾಸ ಇಮ್ಮಡಿಯಾಗಿ ಎಲ್ಲ ವಿಭಾಗಗಳಲ್ಲಿ ಸೀಟುಗಳ ಸಂಖ್ಯೆಗಳನ್ನು ಹೆಚ್ಚಿಸಲಾಯಿತು. ಕಂಪ್ಯೂಟರ್ ಸೈನ್ಸ್ ಸೀಟುಗಳ ಸಂಖ್ಯೆಯನ್ನು 120ರಿಂದ 180, ಎಲೆಕ್ಟ್ರಾನಿಕ್ಸ್ 45ರಿಂದ 120, ಇನ್ಫರ್ಮೇಷನ್ ಸೈನ್ಸ್ 45 ರಿಂದ 60, ಎಂಬಿಎನಲ್ಲಿ 45ರಿಂದ 120ಕ್ಕೆ ಹೆಚ್ಚಿಸಲಾಯಿತು. ಇದೇ ವರ್ಷ ಸೈಬರ್ ಸೆಕ್ಯೂರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೆಷಿನ್ ಲರ್ನಿಂಗ್ ಎಂಬ ಎರಡು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು, ಜೊತೆಗೆ, ಬಿಇ ಅಂಡರ್‌ಗ್ರಾಜುಯೇಟ್ 360 ರಿಂದ 630ಕ್ಕೆ ಏರಿಕೆ, ಎಂಸಿಎ ಎಲ್ಲವೂ ಸೇರಿ ಈಗ ಕಾಲೇಜಿನಲ್ಲಿ ಸೀಟುಗಳ ಸಂಖ್ಯೆ 837ಕ್ಕೆ ಏರಿಕೆಯಾಗಿದೆ. 2024–25ನೆಯ ಸಾಲಿನಲ್ಲಿ, ಒಂದೇ ವರ್ಷದಲ್ಲಿ 405 ಸೀಟು ಹೆಚ್ಚಾಗಿದೆ. 2024–25ನೇ ಸಾಲಿನ ಪ್ರವೇಶದ ಪ್ರಕ್ರಿಯೆ ಮುಗಿದಿದ್ದು ಈಗಾಗಲೇ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಿಇ ಅಂಡರ್ ಗ್ರಾಜುಯೇಷನ್‌ಗೆ ಪ್ರವೇಶ ಪಡೆದಿದ್ದಾರೆ. ಪೋಸ್ಟ್ ಗ್ರಾಜುಯೇಟ್ ತರಗತಿಗಳಿಗೆ ಪ್ರವೇಶ ಪ್ರಕ್ರಿಯೆ ಪ್ರಗತಿಯಲ್ಲಿದೆ."



ಶ್ರೀದೇವಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಪ್ರಾಂಶುಪಾಲರಾಗಿರುವ ಡಾ.ನರೇಂದ್ರ ವಿಶ್ವನಾಥ್ ಅವರು ಕೆನಡಾದ ಆಲ್ಬರ್ಟ್ ವಿಶ್ವವಿದ್ಯಾನಿಲಯದ ಪಿಎಚ್.ಡಿ. ಪಡೆದಿರುತ್ತಾರೆ. ಮೈಸೂರಿನ ಎನ್.ಐ.ಇ.ಯಲ್ಲಿ ಬಿ.ಇ. ವ್ಯಾಸಂಗ ಮಾಡಿರುವ ಶ್ರೀಯುತರು ಆಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಐದನೆಯ ರ್‍ಯಾಂಕ್ ಪಡೆದ ವಿದ್ಯಾರ್ಥಿ. ಬನಾರಸ್‌ನ ಕಾಶಿ ವಿಶ್ವವಿದ್ಯಾನಿಲಯದ ಚಿನ್ನದ ಪದಕದೊಂದಿಗೆ ಎಂ.ಟೆಕ್. ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಾರೆ. ಪ್ರಾರಂಭದಲ್ಲಿ ಒ.ಎನ್.ಜಿ.ಸಿಯಲ್ಲಿ ಕೆಲಸ ಮಾಡಿದರೂ ಅದನ್ನು ತೊರೆದು ತಮ್ಮ ಆಸಕ್ತಿಗನುಗುಣವಾಗಿ ಬೋಧನಾಕ್ಷೇತ್ರಕ್ಕೆ ಬಂದು ವಿವಿಧ ಕಡೆ ಹತ್ತು ವರ್ಷ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ, ಐದು ವರ್ಷದ ಹಿಂದೆ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜ್‌ಗೆ ಪ್ರಾಂಶುಪಾಲರಾಗಿ ಆಗಮಿಸಿದ್ದಾರೆ. ಪ್ರಸ್ತುತ ಈ ಕಾಲೇಜ್‌ನ್ನು ಶೈಕ್ಷಣಿಕವಾಗಿ ರಾಷ್ಟ್ರಮಟ್ಟದ ಸಂಸ್ಥೆಯನ್ನಾಗಿ ರೂಪಿಸುವುದು ಅವರ ಸಂಕಲ್ಪವಾಗಿದೆ.

## ಮುಂದೆ ಮಾನ್ಯತೆ ಮಾತ್ರ !

**ದೇಶಾದ್ಯಂತ 820 ವಿಶ್ವವಿದ್ಯಾಲಯಗಳು ಹಾಗೂ 15 ಸಾವಿರಕ್ಕೂ ಹೆಚ್ಚು ಕಾಲೇಜುಗಳು ಈವರೆಗೆ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯ (ನ್ಯಾಕ್) ಮಾನ್ಯತೆ ಪಡೆದಿವೆ. ಉನ್ನತ ಶಿಕ್ಷಣದ ಗುಣಮಟ್ಟ ನಶಿಸದಂತೆ ಕಾಪಾಡುವುದೇ ಇದರ ಮುಖ್ಯ ಉದ್ದೇಶ. ಕಾಲೇಜುಗಳಲ್ಲಿನ ಮೂಲಸೌಕರ್ಯ, ಕಲಿಕಾ ವಿಧಾನ, ಆಡಳಿತ ನಿರ್ವಹಣೆ ಮುಂತಾದ ಮಾನದಂಡಗಳ ಆಧಾರದ ಮೇಲೆ ಕಾಲೇಜುಗಳಿಗೆ ಮಾನ್ಯತೆ ದೊರೆಯುತ್ತದೆ. ಈ ಮಾನ್ಯತೆಯ ಅವಧಿ ಐದು ವರ್ಷಗಳವರೆಗೆ ಇರಲಿದ್ದು, ಪ್ರತಿವರ್ಷ ನ್ಯಾಕ್ ಸದಸ್ಯರು ಕಾಲೇಜುಗಳಿಗೆ ಭೇಟಿ ನೀಡಿ ಗುಣಮಟವನ್ನು ಪರಿಶೀಲಿಸುತ್ತಾರೆ. ಶಿಕ್ಷಣ ಸಂಸ್ಥೆಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಡೆಯಲು ಹಾಗೂಇನ್ನಿತರ ಕಾರಣಗಳ ಹಿನ್ನೆಲೆಯಲ್ಲಿ ಇನ್ನು ಮುಂದೆ ಗ್ರೇಡ್ ನೀಡುವ ಹಳೆಯ ಸಂಪ್ರದಾಯವನ್ನು ಕೈಬಿಟ್ಟು ಮಾನ್ಯತೆಯನ್ನು ಮಾತ್ರ ನೀಡಲು ನಿರ್ಧರಿಸಲಾಗಿದೆ.**

### ಮೂಲಭೂತ ಸೌಕರ್ಯದಲ್ಲಿ ನೂರು ಅಂಕ

ನ್ಯಾಕ್‌ನ ಮೂವರು ಸದಸ್ಯರುಕಾಲೇಜಿಗೆ ಭೇಟಿ ನೀಡಿ ಮೌಲ್ಯಮಾಪನ ನಡೆಸಿದರು. ಕಲಿಕೆ, ಬೋಧನೆ, ಆಡಳಿತ ನಿರ್ವಹಣೆ ಮೂಲಸೌಕರ್ಯ ಮೊದಲಾದ ಏಳು ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿದ್ದಾರೆ. ಈ ಪೈಕಿ ಮೂಲಸೌಕರ್ಯ ವಿಭಾಗದಲ್ಲಿ ಕಾಲೇಜಿಗೆ ನೂರಕ್ಕೆ ನೂರು ಅಂಕ ಲಭ್ಯವಾಗಿದೆ. ಕಲಿಕಾ ಸಾಮರ್ಥ್ಯ, ಬೋಧನೆ ಮತ್ತುಆಡಳಿತ ನಿರ್ವಹಣೆಯಲ್ಲಿ 400 ಅಂಕಗಳಿಗೆ 375 ಅಂಕ ಲಭ್ಯವಾಗಿದೆ. ಆಡಳಿತ ನಿರ್ವಹಣೆಯಲ್ಲಿ ಶೇಕಡ 90ರಷ್ಟು ಸಾಧನೆ ಮಾಡಿದುದರಿಂದ ನಮ್ಮ ಸಂಸ್ಥೆಗೆ ನ್ಯಾಕ್ ಎ ಗ್ರೇಡ್ ಮಾನ್ಯತೆ ಲಭ್ಯವಾಗಿದೆ. ಇದರಿಂದಾಗಿದೇಶದ ಪ್ರತಿಷ್ಠಿತತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಾಲಿಗೆ ಶ್ರೀದೇವಿ ಇಮನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸೇರ್ಪಡೆಯಾಗಿದೆ. ಇದು ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ ಹೊಸ ಸಂಚಲನ, ಹೊಸ ಭರವಸೆಯನ್ನು ಮೂಡಿಸಿದೆ. ಮೇಲಾಗಿ ಇಲ್ಲಿಂದ ಪದವಿ ಮತ್ತು ಸರ್ಟಿಫಿಕೇಟ್ ಪಡೆದು ಹೊರಬರುವ ವಿದ್ಯಾರ್ಥಿಗಳಿಗೆ ದೇಶದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಲಭ್ಯವಾಗಲಿವೆ. ಜೊತೆಗೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವ ಅವಕಾಶಗಳು ಕೂಡದೊರೆಯಲಿವೆ.

ಪಿಹೆಚ್.ಡಿ. ವ್ಯಾಸಂಗ ಮಾಡುವವರಿಗೆ ಸರ್ಕಾರದಿಂದ ಹಣಕಾಸಿನ ನೆರವು ದೊರೆಯಲಿದೆ. ದೇಶದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಜೊತೆಗೂಡಿ ಸಂಶೋಧನೆ ಮಾಡುವ ಅವಕಾಶಗಳೂ ದೊತರೆಯುತ್ತವೆ.

### ಎನ್‌ಬಿಎ–ಎನ್‌ಐಆರ್‌ಎಫ್ (NIRF) ಮುಂದಿನ ಗುರಿ

ಎನ್‌ಬಿಎ ಮತ್ತು ಎನ್‌ಐಆರ್‌ಎಫ್ ಮಾನ್ಯತೆ ಪಡೆಯುವುದು ನಮ್ಮ ಮುಂದಿನ ಗುರಿಯಾಗಿದೆ. ಇದಕ್ಕಾಗಿ ನಾವು ಈಗಾಗಲೇ ಪೂರ್ವಭಾವಿಸಭೆಗಳನ್ನು ನಡೆಸಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಪ್ರತಿಷ್ಠಿತ ಸಂಸ್ಥೆಗಳಾದ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ಆಫ್ ಸೈನ್ಸ್, ಮದ್ರಾಸ್ ಐಐಟಿ, ದೆಹಲಿ ಐಐಟಿ, ಬಾಂಬೆ ಐಐಟಿ, ಇವು ಎನ್‌ಐಆರ್‌ಎಫ್ ಮಾನ್ಯತೆ ಪಡೆದಿವೆ. ಕಲಿಕೆ, ಬೋಧನೆ, ಮಾನವ ಸಂಪನ್ಮೂಲ, ಸಂಶೋಧನೆಗಳಲ್ಲಿನ ಪರಿಣತಿಯ ಮಾನದಂಡಗಳ ಆಧಾರದಮೇಲೆ ಪ್ರತಿವರ್ಷ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಎನ್‌ಐಆರ್‌ಎಫ್ (National Institutional Ranking Frame Work) ಸಂಸ್ಥೆಗಳ ಗ್ರೇಡ್ ಪಟ್ಟಿಯನ್ನು ಪ್ರಕಟಿಸುತ್ತದೆ. 2025ನೇ ಸಾಲಿನಲ್ಲಿ ಈ ಗುರಿಯನ್ನು ಮುಟ್ಟುವ ವಿಶ್ವಾಸ ನಮಗಿದೆ.

### ಹೆಚ್ಚಿದ ಜವಾಬ್ದಾರಿ

ನ್ಯಾಕ್ ಮಂಡಳಿ ನೀಡಿರುವ ಎ ಗ್ರೇಡ್ ಅವಧಿ ಐದು ವರ್ಷಗಳಿಗೆ ಸೀಮಿತವಾಗಿದೆ. ಮಂಡಳಿಯು ಪ್ರತಿ ವರ್ಷ ಕಾಲೇಜಿಗೆ ಭೇಟಿ ನೀಡಿಮೇಲೆ ಸೂಚಿಸಲಾಗಿರುವ ಮಾನದಂಡಗಳನ್ನು ಪರಿಶೀಲಿಸುತ್ತದೆ. ಮಾನ್ಯತೆ ಸಿಕ್ಕಿದೆ ಎಂದು ನಾವು ಮೈಮರೆಯುವಂತಿಲ್ಲ. ಪ್ರತಿ ವರ್ಷ ಡಿಸೆಂಬರ್‌ನಲ್ಲಿ ಕಾಲೇಜಿನ ವಾರ್ಷಿಕ ವರದಿಯನ್ನು ಸಲ್ಲಿಸಬೇಕಾಗುತ್ತದೆ. ನಿಗದಿಪಡಿಸಿದ ಮಾನದಂಡಗಳನ್ನು ಪಾಲಿಸದಿದ್ದರೆ ಮಾನ್ಯತೆ ರದ್ದುಪಡಿಸುವ ಅಧಿಕಾರವನ್ನು ನ್ಯಾಕ್ ಹೊಂದಿದೆ. ಹೀಗಾಗಿ ನಾವು ಪ್ರತಿದಿನವೂ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಬೇಕಾಗುತ್ತದೆ. ಪ್ರಸ್ತುತ 24 ಪಿಹೆಚ್.ಡಿ. ಪದವೀಧರರು ನಮ್ಮ ಕಾಲೇಜಿನಲ್ಲಿದ್ದು, 20 ವಿದ್ಯಾರ್ಥಿಗಳು ಪಿಹೆಚ್.ಡಿ. ಮಾಡುತ್ತಿದ್ದಾರೆ. ಇನ್ನು, 15 ವಿದ್ಯಾರ್ಥಿಗಳು ಹೊರಗಿನಿಂದ ತಮ್ಮ ಪಿಹೆಚ್.ಡಿ. ಮುಗಿಸಿದ್ದಾರೆ.


ಕೈಗಾರಿಕೆಗಳ ಇಂದಿನ ಬೇಡಿಕೆ–ಆವಶ್ಯಕತೆಗಳನ್ನು ಅರಿತು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಕಾಲಕಾಲಕ್ಕೆ ವಿಚಾರ ಸಂಕಿರಣ ಏರ್ಪಡಿಸಿ ಅವರು ತಮ್ಮ ವೃತ್ತಿಬದುಕಿನ ಅನುಭವ ಹಂಚಿಕೊಳ್ಳುವ ವೇದಿಕೆಗಳನ್ನು ಕಲ್ಪಿಸಲಾಗುತ್ತಿದೆ. ಯಾವ ಯಾವ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ, ವಿದ್ಯಾರ್ಥಿಗಳು ಅವುಗಳಿಗೆ ಯಾವ ರೀತಿ ಸಿದ್ಧವಾಗಬೇಕು ಎಂಬ ಬಗ್ಗೆಯೂ ನಿರಂತರ ಮಾರ್ಗದರ್ಶನ ಮಾಡಲಾಗುತ್ತಿದೆ. ಪ್ರತಿಭೆ ಹಾಗೂ ಸಾಮರ್ಥ್ಯಗಳ ಅನ್ವೇಷಣೆಗಾಗಿ ಹ್ಯಾಕಥಾನ್ ಎಂಬ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದಕ್ಕೆ ಪೂರಕವಾಗಿ, ನಮ್ಮ ಸಂಸ್ಥೆಯ ಪ್ರಿನ್ಸಿಪಾಲ್ ಅವರ ವೈಯಕ್ತಿಕ ಹಾಗೂ ಸಂಸ್ಥೆಯಲ್ಲಿನ ಉತ್ತಮ ಕಾರ್ಯಗಳನ್ನು ಗುರುತಿಸಿ ಅವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಕಾಡಮಿಕ್ ಸಿಂಡಿಕೇಟ್‌ನ ಸದಸ್ಯರನ್ನಾಗಿ ರಾಜ್ಯ ಸರ್ಕಾರ ನಾಮಕರಣ ಮಾಡಿರುವುದು ಅವರ ಸಾಧನೆಗೆ ಸಂದ ಗೌರವವಾಗಿದೆ.

### ಭೇಟಿ ನೀಡಿದ ಗಣ್ಯರು

ಇತ್ತೀಚೆಗೆ ಇಸ್ರೋದ ಮಾಜಿ ಅಧ್ಯಕ್ಷರಾದ ಕಿರಣ್‌ಕುಮಾರ್ ಮತ್ತು ಸಿಐಡಿ ಸೈಬರ್‌ಕ್ರೈಂ ವಿಭಾಗದ ಮುಖ್ಯಸ್ಥರಾದ ಎಡಿಜಿಪಿ ಪ್ರಣಬ್ ಮೊಹಂತಿ ಅವರು ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಅಮೆರಿಕದ ಲೀಡ್ ಓಡ್ಯೋಶ್ ಕಾರ್ಪೋರೇಷನ್‌ನ ಸಿಸ್ಟಮ್ ಇಂಜಿನಿಯರ್ ಎನ್.ಗುರುಮೂರ್ತಿ ಅವರು ಭೇಟಿ ನೀಡಿ, ರೊಬೊಟಿಕ್ ತಂತ್ರಜ್ಞಾನದ ಬಗೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಮೋಟಿವೇಷನಲ್ ಸ್ಪೀಕರ್ ಅಜಿತ್ ಕೈಕಾನಿ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಡಾ.ಇ.ವಿ.ರಮಣರೆಡ್ಡಿ ಮೊದಲಾದವರು ಕಾಲೇಜಿಗೆ ಭೇಟಿ ನೀಡಿ ಜಾಗತಿಕ ತಂತ್ರಜ್ಞಾನದಲ್ಲಿನ ಏರಿಳಿತ ಹಾಗೂ ಸಮಕಾಲೀನ ವಿಚಾರಧಾರೆಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡಿದ್ದಾರೆ.

## ಪ್ರಯತ್ನಕ್ಕೆ ಫಲ ಡಾ.ಬಿ.ಎನ್. ಪ್ರತಾಪ್

**ಡಾ. ಬಿ.ಎನ್.ಪ್ರತಾಪ್ ಹುಟ್ಟಿದ್ದು ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಕೂಲಂಬಿ ಗ್ರಾಮದಲ್ಲಿ. ವಿದ್ಯಾಭ್ಯಾಸ ಮತ್ತು ಭವಿಷ್ಯ ಕಟ್ಟಿಕೊಂಡಿದ್ದು ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಿಂದ ಹಿಡಿದು ಬಿ.ಇ., ಎಂ.ಬಿ.ಎ. ಮತ್ತು ಪಿಹೆಚ್.ಡಿ.ವರೆಗಿನ ಶಿಕ್ಷಣವನ್ನು ತುಮಕೂರಿನಲ್ಲಿ ಪೂರ್ಣಗೊಳಿಸಿರುತ್ತಾರೆ.**



**ನ್ಯಾಕ್ ಮಾನ್ಯತೆ ಪಡೆಯುವಲ್ಲಿ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಐಕ್ಯೂಎಸಿ (IQAC) ನಿರ್ದೇಶಕ ಬಿ.ಎನ್. ಪ್ರತಾಪ್ ಅವರ ಪರಿಶ್ರಮ ಹಾಗೂ ಮಾರ್ಗದರ್ಶನ ಪ್ರಮುಖವಾಗಿತ್ತು.**

**ನೆನಪಿನಲ್ಲಡಬೇಕಾದ ಮಾತು**

"ನೀವು ಯಶಸ್ಸನ್ನು ಪಡೆಯಲು ದೃಢಪ್ರಯತ್ನ ಮಾಡಬೇಕು. ನಿಮ್ಮಲ್ಲಿ ಅಪಾರ ಇಚ್ಛಾಶಕ್ತಿ ಇರಬೇಕು. 'ನಾನು ಸಮುದ್ರವನ್ನೇ ಕುಡಿದುಬಿಡುತ್ತೇನೆ' ಎಂದು ಪ್ರಯತ್ನಶೀಲನು ಹೇಳುತ್ತಾನೆ. 'ನನ್ನ ಸಂಕಲ್ಪದ ಮುಂದೆ ಪರ್ವತಗಳೇ ಪುಡಿಪುಡಿಯಾಗುತ್ತವೆ' ಎನ್ನುತ್ತಾರೆ ಕೆಲವರು. ಇಂತಹ ಶಕ್ತಿಯನ್ನೂ ಮತ್ತು ಛಾತಿಯನ್ನು ಪಡೆಯಿರಿ. ಅದಕ್ಕಾಗಿ ಕಷ್ಟಪಟ್ಟು ದುಡಿಯಿರಿ, ನೀವು ಗುರಿ ಸೇರುವುದು ನಿಶ್ಚಯ.

**ಸ್ವಾಮಿ ವಿವೇಕಾನಂದ,** (ಸ್ವಾಮಿ ವಿವೇಕಾನಂದರ 'ವಿದ್ಯುತ್‌ವಾಣಿ' ಗ್ರಂಥದಿಂದ)



# ಜೀವರಕ್ಷಣೆಯಲ್ಲಿಕೌಶಲ-ಪ್ರಯೋಗಾಲಯಗಳ ಪಾತ್ರ

▪ ಕೆ.ಎಸ್. ರಾಜಮನ್ನಾರ್

"ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಅತಿ ಹೆಚ್ಚು ವೈದ್ಯಕೀಯ ಕಾಲೇಜುಗಳಿವೆ. ರಾಷ್ಟ್ರೀಯ ವೈದ್ಯಕೀಯ ಆಯೋಗದ ಶಿಫಾರಸ್ಸಿನಂತೆ ಪ್ರತಿಯೊಂದು ವೈದ್ಯಕೀಯ ಕಾಲೇಜೂ ಸುಸಜ್ಜಿತ, ಆಧುನಿಕ ಕೌಶಲ-ಪ್ರಯೋಗಾಲಯವನ್ನು ಹೊಂದಿರುವುದು ಕಡ್ಡಾಯವಾಗಿದೆ. ವೈದ್ಯಕೀಯ ವೃತ್ತಿಯಲ್ಲಿ ಪರಿಪೂರ್ಣತೆ, ಸಾಮರ್ಥ್ಯ ಮತ್ತು ದಕ್ಷತೆಗಳನ್ನು ಹೆಚ್ಚಿಸುವುದು ಈ ಕ್ರಮದ ಉದ್ದೇಶವಾಗಿದೆ."

ಮಾನವದೇಹದ ಅಂಗರಚನೆ, ಕಾರ್ಯವೈಖರಿಗಳನ್ನು ನೋಡಿದರೆ ವೈದ್ಯಕೀಯ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಆಗಿರುವ ಸಂಶೋಧನೆಗಳು, ಮಾಡಿರುವ ನಮ್ಮ ಸಾಧನೆಗಳು ಏನೇನೂ ಸಾಲದು ಎಂಬ ಭಾವನೆ ಬೇರೂರುವುದು ಸಹಜ. ಈ ನಿಟ್ಟಿನಲ್ಲಿ ವೈದ್ಯಕೀಯಕೌಶಲ-ಪ್ರಯೋಗಾಲಯಗಳ ಪಾತ್ರ ಮತ್ತು ಮಹತ್ವ ಬಹಳವಾಗಿವೆ. ವೈದ್ಯಕೀಯಕ್ಷೇತ್ರಕ್ಕೆ ಬರುವವರು ವೃತ್ತಿಯಲ್ಲಿ ಪರಿಣತರಾಗುವಂತೆ ಮಾಡುವಲ್ಲಿ ಇಂತಹ ಪ್ರಯೋಗಾಲಯಗಳು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

**'ರಾಷ್ಟ್ರೀಯ ವೈದ್ಯಕೀಯ ಆಯೋಗ'**

ಶಸ್ತ್ರಕ್ರಿಯೆಯನ್ನು ಕಲಿಸುವ ಅಥವಾ ಇತರ ವೈದ್ಯಕೀಯ ಪ್ರಕ್ರಿಯೆಗಳನ್ನು ವಿವರಿಸುವ ಪ್ರತಿಯೊಂದು ಸಂದರ್ಭದಲ್ಲಿಯೂ ಮಾನವನ ಮೃತದೇಹಗಳನ್ನು ಬಳಸುವುದು ಸಾಧ್ಯವಿಲ್ಲ. ಅದರ ಬದಲಿಗೆ ಸಂಪೂರ್ಣವಾಗಿ ಮಾನವನಂತೆಯೇ ಕಾಣುವ ಪ್ರತಿಕೃತಿಗಳನ್ನು (manikin) ಬಳಸಿ, ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪ್ರಕ್ರಿಯೆಗಳನ್ನು ನಡೆಸುವುದು ಹೇಗೆ, ತುರ್ತು ಸಮಯದಲ್ಲಿ ಅವರು ಹೇಗೆ ನಡೆದುಕೊಳ್ಳಬೇಕು, ಏನನ್ನು ಮಾಡಬೇಕು ಹಾಗೂ ಏನನ್ನು ಮಾಡಬಾರದು ಎಂಬುದರ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ. ರಾಷ್ಟ್ರೀಯ ವೈದ್ಯಕೀಯ ಆಯೋಗವು ದೇಶದ ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಕೌಶಲ ಪ್ರಯೋಗಾಲಯಗಳ ಸ್ಥಾಪನೆಯನ್ನು ಕಡ್ಡಾಯಗೊಳಿಸಿದೆ. ಈ ಆಯೋಗದ ಮಾರ್ಗದರ್ಶಿ ಸೂತ್ರಗಳಿಗೆ ಅನುಸಾರವಾಗಿ, ರಾಜ್ಯದ ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಕೌಶಲ-ಪ್ರಯೋಗಾಲಯಗಳನ್ನು ತೆರೆಯಲಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳ ಪೈಕಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಎರಡು ಪ್ರಯೋಗಾಲಯಗಳನ್ನು ಸ್ಥಾಪಿಸಿದೆ. ಇನ್ನೂ ಹಲವು ಕಾಲೇಜುಗಳಲ್ಲಿ ಈ ರೀತಿಯ ಪ್ರಯೋಗಾಲಯಗಳನ್ನು ಆರಂಭಿಸಲಾಗಿದೆ ಮತ್ತು ಕೆಲವು ಕಾಲೇಜುಗಳಲ್ಲಿ ಇಂತಹ ಪ್ರಯೋಗಾಲಯಗಳು ನಿರ್ಮಾಣದ ಹಂತದಲ್ಲಿವೆ.

ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ವಿದೇಶಗಳಿಂದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಆಮದು ಮಾಡಿಕೊಂಡು ಈ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ. ಈ ಪ್ರಯೋಗಾಲಯದಲ್ಲಿ 20 ನುರಿತ ಸಿಬ್ಬಂದಿಗಳಿದ್ದಾರೆ.

ಕೌಶಲ-ಪ್ರಯೋಗಾಲಯ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಕಾಲೇಜಿನ ಅಂಗರಚನಾಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಯೋಗೇಶ್ ಡಿ. ವಿವರಿಸಿದ್ದಾರೆ. ಒಂದು ಜೀವವನ್ನು ಕಾಪಾಡುವಲ್ಲಿ ವೈದ್ಯರು, ದಾದಿಯರು ಮತ್ತು ವೈದ್ಯಕೀಯ ವೃತ್ತಿಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡ ಇತರರು ಯಾವ ರೀತಿಯ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಮತ್ತು ಅವರು ತಮ್ಮ ಕಾರ್ಯವನ್ನು ಯಾವ ರೀತಿ ಮಾಡಬೇಕಾಗುತ್ತದೆ ಎಂಬುದನ್ನು ಈ ಕೌಶಲ-ಪ್ರಯೋಗಾಲಯಗಳಲ್ಲಿ ಕಲಿಸಿಕೊಡಲಾಗುತ್ತದೆ. ಇನ್ನೂ ಸರಳವಾಗಿ ಹೇಳಬೇಕೆಂದರೆ ಇವುಗಳನ್ನು ಜೀವ ಉಳಿಸುವ ತರಬೇತಿ ಶಾಲೆಗಳು ಎನ್ನಬಹುದು.

ವೈದ್ಯಕೀಯ ವಿದ್ಯಾಭ್ಯಾಸದಲ್ಲಿ



**ಕುಗ್ರಾಮದ ಮೇರು ಪ್ರತಿಭೆ**

ಡಾ.ಡಿ.ಯೋಗೇಶ್ ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ದಾಸಯ್ಯನಹಟ್ಟಿ ಎಂಬ ಕುಗ್ರಾಮದಲ್ಲಿ. ಮಂಗಳೂರಿನ ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಮುಗಿಸಿ, ಗುಜರಾತಿನ ಅಹ್ಮದಾಬಾದಿನಲ್ಲಿ ಎಂ.ಡಿ. ಅನಾಟಮಿ ಪದವಿಯನ್ನು ಪಡೆದು ಕಳೆದ ಒಂದೂವರೆ ವರ್ಷದಿಂದ ಶ್ರೀದೇವಿ ವೈದ್ಯಕೀಯ ಕಾಲೇಜಿನ ಅಂಗರಚನಾಶಾಸ್ತ್ರ (ಅನಾಟಮಿ) ವಿಭಾಗದಲ್ಲಿ ಸಹಪ್ರಾಧ್ಯಾಪಕರಾಗಿ ಮತ್ತು ಶ್ರೀದೇವಿ ಆಧುನಿಕ ಕೌಶಲ ಕೇಂದ್ರದ ಕೋ-ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ತಂದೆ ದಾಸಪ್ಪ, ತಾಯಿ ಯಲ್ಲಮ್ಮ. ಗೋವಿಂದರಾಜು ಅವರು ಡಾ. ಯೋಗೇಶ್ ಅವರ ಏಕಮಾತ್ರ ಸಹೋದರ. ಇವರದ್ದು ಒಟ್ಟು ನಾಲ್ಕು ಸದಸ್ಯರು ಇರುವ ಕೂಡು ಕುಟುಂಬ.

ತೊಡಗಿಕೊಂಡಿರುವ ವಿದ್ಯಾರ್ಥಿಗಳ ತರಬೇತಿಗಷ್ಟೇ ಸೀಮಿತವಾಗದೆ ಜೀವ ಉಳಿಸಲು ಆಸಕ್ತಿ ತೋರುವ ಶಾಲೆ ಹಾಗೂ ಇತರ ಕಾಲೇಜು ವಿದ್ಯಾರ್ಥಿಗಳಿಗೂ ಹಾಗೂ ಜನಸಾಮಾನ್ಯರಿಗೂ ಸಹ ಈ ತರಬೇತಿಯ ಆವಶ್ಯಕತೆ ಇದೆ.

ಸಾಮಾನ್ಯ ಜನರಿಗೆ ತರಬೇತಿ ನೀಡುವುದರಿಂದ ಹೇಗೆ ಜೀವವನ್ನು ಕಾಪಾಡಬಹುದು ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು. ಒಂದು ಗ್ರಾಮದಲ್ಲಿ ಹಾವುಗಳ ಕಾಟದಿಂದ ಜನರು ಸಾವಿಗೀಡಾಗುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಜೀವ ಉಳಿಸಲು ತುರ್ತಾಗಿ ಏನು ಮಾಡಬೇಕು, ಅನಂತರ ಅವರನ್ನು ಸೌಲಭ್ಯಗಳಿರುವ ಆಸ್ಪತ್ರೆಗಳಿಗೆ ಹೇಗೆ ಕರೆತರಬೇಕು ಎನ್ನುವುದರ ಬಗೆಗೆ ಈ ಪ್ರಯೋಗಾಲಯಗಳಲ್ಲಿ ತರಬೇತಿಯನ್ನು ಇದರಲ್ಲಿ ನೀಡಲಾಗುತ್ತದೆ. ಇದು ಜನರ ಜೀವವನ್ನು ಉಳಿಸಲು ಸಹಕಾರಿಯಾಗುತ್ತದೆ. ಹೃದಯಸ್ತಂಭನವಾದಾಗ ಎದೆಯನ್ನು ಹೇಗೆ ಒತ್ತಿ ಹೃದಯವನ್ನು ಪುನಶ್ಚೇತನ ಗೊಳಿಸಬೇಕು ಎನ್ನುವುದನ್ನು ಕಲಿಸಿಕೊಡುತ್ತಾರೆ.

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ 'ಜೀವರಕ್ಷ ಇಸಿಎಲ್‌ಎಸ್' (JeevaRakshac ECLS - comprehensive Emergency Care and Life Support) ಎನ್ನುವ ನಾಲ್ಕು ದಿನಗಳ ತುರ್ತುಚಿಕಿತ್ಸಾ ತರಬೇತಿಯನ್ನು ಸಹ ಶ್ರೀದೇವಿ ವೈದ್ಯಕೀಯ ಕಾಲೇಜಿನ ಕೌಶಲ-ಪ್ರಯೋಗಾಲಯದಲ್ಲಿ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಪಡೆಯಬಹುದಾಗಿದೆ. ಇವರಿಗಷ್ಟೇ ಅಲ್ಲದೆ, ಶಾಲಾ-ಕಾಲೇಜು ಮಕ್ಕಳು ಮತ್ತು ಸಂಘ ಸಂಸ್ಥೆಗಳ ಮೂಲಕ ಜನಸಾಮಾನ್ಯರು ಆಸಕ್ತಿ ತೋರಿದರೆ ಅಂತಹವರಿಗೂ ಕನಿಷ್ಠ ಶುಲ್ಕವನ್ನು ಪಡೆದು ತುರ್ತು ಸಂದರ್ಭಗಳಲ್ಲಿ ಜೀವ ಉಳಿಸುವುದರ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇದಕ್ಕೆ ನಿಗದಿಪಡಿಸಲಾಗಿದೆ.

ಹೃದಯಾಘಾತ, ಹೃದಯಸ್ತಂಭನ, ಉಸಿರಾಟ ನಿಂತುಹೋಗುವಿಕೆ ಇವುಗಳಿಗೆ ಒಳಗಾದವರು, ಹಠಾತ್ತನೆ ಕುಸಿದು ಬಿದ್ದವರು, ರಸ್ತೆಅಪಘಾತಕ್ಕೆ ಈಡಾದವರು, ಗುಂಡೇಟಿನಿಂದ ಗಾಯಗೊಂಡವರು, ಚಾಕು, ಚೂರಿಗಳ ಇರಿತಕ್ಕೆ ಒಳಗಾದವರು, ಹಾವಿನಿಂದ ಕಚ್ಚಲ್ಪಟ್ಟವರು, ವಿಷಕುಡಿದವರು – ಹೀಗೆ ತೀರಾ ವಿಷಮಸ್ಥಿತಿಯಲ್ಲಿರುವವರಿಗೆ ಮತ್ತು ಜೀವದ ಅಪಾಯಕ್ಕೆ ಸಿಲುಕಿದವರಿಗೆ ಯಾವ ರೀತಿಯ ಪ್ರಥಮ ಚಿಕಿತ್ಸೆಯನ್ನು ನೀಡಬೇಕು ಮತ್ತುಅವರನ್ನು ಸುಸಜ್ಜಿತ ಆಸ್ಪತ್ರೆಗೆ ಕರೆದುಕೊಂಡು ಹೋಗುವವರೆಗೆ ಹೇಗೆ ನೋಡಿಕೊಳ್ಳಬೇಕು ಎಂಬುದರ ಬಗೆಗೆ ಸಮಗ್ರವಾಗಿ ತರಬೇತಿ ಮತ್ತು ತಿಳುವಳಿಕೆ ನೀಡಿ ಪ್ರತಿಯೊಬ್ಬರನ್ನು ಸಾಂದರ್ಭಿಕ ವೈದ್ಯರನ್ನಾಗಿಸುವುದೇ ಇದರ ಪ್ರಮುಖ ಉದ್ದೇಶ ಮತ್ತು ಗುರಿ ಎಂಬುದನ್ನು ಡಾ. ಡಿ. ಯೋಗೇಶ್ ಒತ್ತಿ ಹೇಳುತ್ತಾರೆ.

**ತರಬೇತಿಯ ವಿಧಾನ**

ನರಗಳಿಗೆ, ಮಾಂಸ ಖಂಡಗಳಿಗೆ ಯಾವ ರೀತಿ ಇಂಜೆಕ್ಷನ್ ಕೊಡಬೇಕು, ಹೆರಿಗೆ ಸಮಯದಲ್ಲಿ ಉಸಿರಾಟದ ಸಮಸ್ಯೆ ಎದುರಾದರೆ ಅದನ್ನು ಹೇಗೆ ನಿವಾರಿಸಬೇಕು ಮತ್ತು ಹೆರಿಗೆ ಸಂದರ್ಭದಲ್ಲಿ ರಕ್ತಸ್ರಾವದಿಂದ ತೊಂದರೆ ಉಂಟಾದರೆ ಅಂತಹ ಸಂದರ್ಭದಲ್ಲಿ ಏನು ಮಾಡಬೇಕು, ಹೃದಯಘಾತ, ಹೃದಯಸ್ತಂಭನಗಳ ಸನ್ನಿವೇಶದಲ್ಲಿ ರೋಗಿಗೆ ಉಸಿರಾಟಕ್ಕೆ ಹೇಗೆ ಅನುಕೂಲ ಮಾಡಿಕೊಡಬೇಕು, ಹೃದಯವನ್ನು ಪುನಶ್ಚೇತನಗೊಳಿಸುವುದು ಹೇಗೆ, ಹೆರಿಗೆ ಸಂದರ್ಭದಲ್ಲಿ ರಕ್ತಸ್ರಾವದ ತೊಂದರೆಯಾದರೆ ಅದನ್ನು ಹೇಗೆ ನಿವಾರಿಸಬೇಕು, ಹುಟ್ಟಿದ ಮಗುವನ್ನು ಯಾವರೀತಿ ಕಾಪಾಡಬೇಕು, ಉಸಿರಾಟ ಮತ್ತು ಹೃದಯದ ಸಮಸ್ಯೆಯಿದ್ದಲ್ಲಿ ಅಂತಹ ವ್ಯಕ್ತಿಗಳಿಗೆ ಯಾವರೀತಿ ಮರುಜೀವ ಕೊಡಬೇಕು ಮೊದಲಾದವುಗಳನ್ನು ಇಲ್ಲಿ ಹೇಳಿಕೊಡಲಾಗುತ್ತದೆ. ಪ್ರಯೋಗಾಲಯಕ್ಕೆ ಕರೆದುಕೊಂಡು ಹೋಗುವ ಮುನ್ನ ನುರಿತ ವೈದ್ಯರು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತಾರೆ. ವಿದ್ಯಾರ್ಥಿಗಳ ಕೆಲಸವನ್ನು ನುರಿತ ವೈದ್ಯರು ನಿಯಂತ್ರಣ ಕೊಠಡಿಯಿಂದ ಕಂಪ್ಯೂಟರ್ ಮೂಲಕ ಪರಿಶೀಲಿಸುತ್ತಿರುತ್ತಾರೆ. ಒಂದು ವೇಳೆ ವಿದ್ಯಾರ್ಥಿಗಳು ಪ್ರಯೋಗಾಲಯದಲ್ಲಿ ತಪ್ಪು ಮಾಡಿದರೆ ಅವರನ್ನು ಅಧ್ಯಾಪಕರು ತಿದ್ದುತ್ತಾರೆ. ಸತತವಾಗಿ ತರಬೇತಿಯನ್ನು ನೀಡುವ ಮೂಲಕ ವಿದ್ಯಾಭ್ಯಾಸದ ಅನಂತರ ತಮ್ಮ ವೃತ್ತಿಜೀವನವನ್ನು ಆರಂಭಿಸುವುದಕ್ಕೆ ಈ ಪ್ರಯೋಗಾಲಯದಲ್ಲಿನ ಕಲಿಕೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ, ಸ್ವಂತ ಸಾಮರ್ಥ್ಯವನ್ನು ಗಳಿಸಲು ಮತ್ತು ವೃತ್ತಿಯಲ್ಲಿ ಪರಿಣತಿಯನ್ನು ಸಾಧಿಸಲು ಕೂಡ ಸಹಾಯಮಾಡುತ್ತದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಾಮಾನ್ಯ ತರಗತಿಯಷ್ಟೇ ಪ್ರಯೋಗಾಲಯಲ್ಲಿನ ಇಂತಹ ತರಬೇತಿಗಳೂ ಮುಖ್ಯವಾಗಿರುತ್ತವೆ.

ಶ್ರೀದೇವಿ ಕೌಶಲ-ಪ್ರಯೋಗಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿ ಕೊಡುವ ಸಲುವಾಗಿ ಉನ್ನತ ಮಟ್ಟದ ಸಿಮ್ಯುಲೇಷನ್ ಸೆಂಟರ್ ಕೂಡ ಇದೆ. ಇದರ ಅಂಗವಾಗಿ ಐಸಿಯು/ ಟ್ರೌಮ/ ಕ್ರಿಟಿಕಲ್‌ಕೇರ್ ಸಿಮ್ಯುಲೇಷನ್, ಉನ್ನತ ಅರಿವಳಿಕೆ ಸಿಮ್ಯುಮುಲೇಷನ್‌ಗಳಿಗೆ ನಿಗದಿತವಾದ ಬೇರೆ ಬೇರೆ ಕೊಠಡಿಗಳಿವೆ, ಈ ಕೊಠಡಿಗಳಲ್ಲಿ ಸಿಮ್ಯುಲೇಷನ್ ಅಂದರೆ ಮ್ಯಾನಿಕಿನ್ ಮೂಲಕ ಆಸ್ಪತ್ರೆಯ ನೈಜ ವಾತಾವರಣವನ್ನು ಸೃಷ್ಟಿ ಮಾಡಿ ತರಬೇತಿ ನೀಡಲಾಗುತ್ತದೆ. ತುರ್ತುಚಿಕಿತ್ಸಾ ಘಟಕದಲ್ಲಿರುವ ಎಲ್ಲಾ ಸೌಲಭ್ಯಗಳೂ ಇಲ್ಲಿದೊರಕುವಂತೆ ಮಾಡಲಾಗಿರುತ್ತದೆ. ನಿಜಜೀವನದಲ್ಲಿ ರೋಗಿಗಳು ಎದುರಿಸುವ ಗಂಭೀರ ಮತ್ತು ಅಪಾಯ ಸನ್ನಿವೇಶಗಳಲ್ಲಿ ತುರ್ತುಚಿಕಿತ್ಸೆಯನ್ನು ನೀಡುವ ವಿಧಾನ ಮತ್ತು ಅನುಸರಿಸ ಬೇಕಾದ ಕ್ರಮ, ಹೃದಯದ ಬಡಿತವನ್ನು ಹೇಗೆ ಹೆಚ್ಚಿಸುವುದು, ರಕ್ತದೊತ್ತಡವನ್ನು ಹೇಗೆ ಕಡಮೆ ಮಾಡುವುದು, ಹೀಗೆ ವಿವಿಧ ಸಂದರ್ಭಗಳಲ್ಲಿ ರೋಗಿಗಳಿಗೆ ಸೂಕ್ತ ಪ್ರಥಮಚಿಕಿತ್ಸೆಯನ್ನು ನೀಡುವುದನ್ನು ಕುರಿತ ವಿಷಯಗಳನ್ನು ವಿಶದವಾಗಿ ಹೇಳಿಕೊಡಲಾಗುತ್ತದೆ. ತರಬೇತಿಯ ಪ್ರತಿಯೊಂದು ಹಂತವನ್ನೂ ನಿರಂತರವಾಗಿ ಪರಿಶೀಲಿಸಲಾಗುತ್ತದೆ. ಹಾಗೂ ಪ್ರತಿಯೊಂದು ಪ್ರಕ್ರಿಯೆಯೂ ಅವುಗಳಿಗೆ ಪಠ್ಯಕ್ರಮದಲ್ಲಿ ನಿರ್ದಿಷ್ಟ ಪಡಿಸಿರುವ ವಿಧಿವಿಧಾನಗಳನ್ನು ಸಂಪೂರ್ಣವಾಗಿ ಅನುಸರಿಸುವಂತೆ ಮಾಡಲು ಪ್ರಮಾಣಿತ ಕಾರ್ಯಾಚರಣೆ ವಿಧಾನಗಳು (SOP - Standard Operating Procedure) ಇರುತ್ತವೆ. ಆದುದರಿಂದ ವಿವಿಧ ವೈದ್ಯರು/ತರಬೇತಿದಾರರು ಅನುಸರಿಸುವ ವಿಧಿ-ವಿಧಾನಗಳು ಒಂದೇ ರೀತಿಯಲ್ಲಿರುತ್ತವೆ.

**ಅನಾಟಮೇಜ್‌ಟೇಬಲ್**

ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಅಂಗರಚನಾಶಾಸ್ತ್ರದ ಪಠ್ಯದ ಪ್ರಕಾರ ಮೃತದೇಹವನ್ನು ಕತ್ತರಿಸಿ, ಪ್ರತಿಯೊಂದು ಭಾಗದ ಪರಿಚಯವನ್ನು ಮಾಡಿಸಬೇಕಾಗುತ್ತದೆ. ಆದರೆ, ಈ ಮೊದಲೇ ತಿಳಿಸಿದಂತೆ ಪ್ರತಿ ಸಲವೂ ತರಬೇತಿಗೆ ಮೃತದೇಹವನ್ನು ಒದಗಿಸುವುದು ಕಷ್ಟಸಾಧ್ಯ. ಅಲ್ಲದೆ ಒಮ್ಮೆ ಕತ್ತರಿಸಿದ ಮೃತದೇಹವನ್ನು ಮತ್ತೆ ಬಳಸುವುದು ಸಾಧ್ಯವಿಲ್ಲ. ಈ ಸಮಸ್ಯೆಯಿಂದ ಪಾರಾಗಲು ಅನಾಟಮೇಜ್‌ಟೇಬಲ್ ಎಂಬ ಸತ್ಯಾಭಾಸದಚಿತ್ರವನ್ನು ಬಳಸಲಾಗುತ್ತದೆ. ಇದಕ್ಕೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತದೆ. ಇದರ ವೈಶಿಷ್ಟವೆಂದರೆ ಇದರಲ್ಲಿ ದೇಹದ ಅಂಗರಚನೆಯು ಹೇಗಿದೆ ಮತ್ತು ಅದರ ಅಂಗಚ್ಛೇದವನ್ನು ಮಾಡಲು ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಕಲಿಸಬಹುದು. ಕೌಶಲ-ಪ್ರಯೋಗಾಲಯದಲ್ಲಿ ನಿಜ ಜೀವನದ ಸನ್ನಿವೇಶವನ್ನು ಪುನರ್ನಿರ್ಮಾಣ ಮಾಡಿ, ತುರ್ತು ಸಂದರ್ಭಗಳಲ್ಲಿ ವಿವಿಧ ಸಾಧನ, ಸಲಕರಣೆಗಳನ್ನು ಬಳಸುವ ರೀತಿಯನ್ನು ಹಾಗೂ ಚಿಕಿತ್ಸೆಯಎಲ್ಲ ಪ್ರಕ್ರಿಯೆಗಳನ್ನೂ ಹೇಗೆ ಮಾಡಬೇಕು ಎಂಬುದರ ಬಗೆಗೆ ದಾದಿಯರು, ಎಂ.ಬಿ.ಬಿ.ಎಸ್. ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ವಿಧಾನದಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ವೃತ್ತಿಜೀವನಕ್ಕೆ ಕಾಲಿಡುವ ವೈದ್ಯರಲ್ಲಿ ಇದು ಆತ್ಮವಿಶ್ವಾಸವನ್ನು ಹೆಚ್ಚು ಮಾಡಿ ಅವರು ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸುವಂತೆ ಅವರನ್ನು ಸಿದ್ಧಗೊಳಿಸಲಾಗುತ್ತದೆ.

# ಕನಕದಾಸರ ಇಚ್ಛಾಶಕ್ತಿ ಮತ್ತು ಸ್ವಾಭಿಮಾನದ ಪ್ರೇರಕ ಶಕ್ತಿ: ಡಾ. ಎಂ.ಆರ್. ಹುಲಿನಾಯ್ಕರ್



ಚಿತ್ರ. ಪ್ರೊ.ಎನ್.ಆರ್.ಲಲಿತಾಂಬಅವರು ಕನಕಜಯಂತಿಯ ಸಂದರ್ಭದಲ್ಲಿ ಕನಕದಾಸರ ಬದುಕು ಮತ್ತು ಸಂದೇಶ ಕುರಿತು ಮಾತನಾಡಿದರು. ಅವರಿಗೆ ಜಿಲ್ಲಾ ಕನಕ ಜಯಂತಿ ಆಚರಣಾ ಸಮಿತಿಯಿಂದ ಸನ್ಮಾನ.

ಇಂದು ಕನ್ನಡ ನಾಡಿಗೆ ಪವಿತ್ರವಾದ ದಿನ. ಹರಿದಾಸರಲ್ಲಿ ಒಬ್ಬರಾದ ಪೂಜ್ಯ ಶ್ರೀ ಕನಕದಾಸರ ಪವಿತ್ರವಾದ ಜನ್ಮದಿನವಿದು. ಕನಕದಾಸರು ತಮ್ಮ ಸಮಕಾಲೀನ ದಾಸಪರಂಪರೆಯಲ್ಲಿ ಶ್ರೇಷ್ಠವಾದ ಸಾಹಿತ್ಯ ಪುರುಷರಾಗಿದ್ದಾರೆ. ಕನಕದಾಸರ ತ್ಯಾಗ ಹಾಗೂ ವೈರಾಗ್ಯ ಬಹಳ ದೊಡ್ಡದು. ಅವರು ವಿಜಯನಗರ ದೊರೆಗಳ ಮಾಂಡಲೀಕರಾಗಿದ್ದರು. ಯುದ್ಧದಲ್ಲಿ ದೊಡ್ಡಯೋಧರಾಗಿ ಪ್ರಸಿದ್ಧವಾಗಿದ್ದರು.

ಕನಕದಾಸರ ವಿಚಾರದಲ್ಲಿ ಐತಿಹಾಸಿಕ ಸಂಗತಿಗಿಂತ ಕಟ್ಟು ಕಥೆಗಳಿಗೆ ಮತ್ತು ಉಪಕಥೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇಂದಿಗೂ ಕೋಲಾರ ಜಿಲ್ಲೆ, ಚಿಂತಾಮಣಿ ತಾಲೂಕು ಕಂದುಕೂರಿನಲ್ಲಿ ಕನಕದಾಸರು ನಿರ್ಮಿಸಿದ ಕೆರೆಯನ್ನು ನೋಡಬಹುದು. ಆ ಕೆರೆಯ ನಿರ್ಮಾಣದೊಂದಿಗೆ 'ಕೋಣನಕಥೆ'ಯನ್ನು ಜೋಡಿಸಿ ಕನಕದಾಸರ ನಿಜವಾದ ಪರಿಶ್ರಮವನ್ನು ಮರೆಮಾಚಲಾಗಿದೆ.

ಕನಕದಾಸರು ಮಧ್ವಾಚಾರ್ಯರ ಸಮಕಾಲೀನರಾಗಿದ್ದ ತ್ರಿವಿಕ್ರಪಂಡಿತಚಾರ್ಯರ 'ಉಷಾಹರಣ' ಸಂಸ್ಕೃತ ಗ್ರಂಥವನ್ನು ಅಭ್ಯಾಸ ಮಾಡಿ ಅದನ್ನು 'ಮೋಹನತರಂಗಿಣಿ' ಎನ್ನುವ ಹೆಸರಿನಲ್ಲಿ ಕನ್ನಡದಲ್ಲಿಕಾವ್ಯ ಬರೆದಿದ್ದಾರೆ. ಹರಿದಾಸರಲ್ಲಿ ಕನಕದಾಸರೊಬ್ಬರೇ ಮಹಾಕವಿಗಳಾಗಿರುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರ, ಕನಕದಾಸರು ಸಂಸ್ಕೃತದಲ್ಲಿ ದೊಡ್ಡ ಜ್ಞಾನಿಗಳಾಗಿದ್ದರು ಎಂಬುದು.

ವ್ಯಾಸರಾಯರು ಕನಕದಾಸರಿಗೆ 'ಕಾಗಿನೆಲೆಯ ಆದಿಕೇಶವ' ಎನ್ನುವ ಅಂಕಿತವನ್ನು ಕೊಟ್ಟರು. ಅದಕ್ಕೆ ಕನಕದಾಸರು ಆಜೀವ ಅವರಿಗೆ ಚಿರಋಣಿಗಳಾಗಿದ್ದರು. ಅವರನ್ನು ತಮ್ಮ ಗುರುಗಳೆಂದು ಒಪ್ಪಿಕೊಂಡಿದ್ದರು. ವ್ಯಾಸರಾಯರು ಕನಕದಾಸರ ಪ್ರತಿಭೆಯನ್ನು ಮತ್ತು ಕವಿತಾಶಕ್ತಿಯನ್ನು ನೋಡಿಯೇ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು ಎಂಬುದನ್ನು ಮರೆಯಬಾರದು. ಕನಕದಾಸರು ಆ ಕಾಲದ ಬಹುದೊಡ್ಡ ವಿದ್ವಾಂಸರು. ಅವರಿಗೆ ಸಂಸ್ಕೃತ, ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಅಪಾರವಾದ ಪಾಂಡಿತ್ಯವಿತ್ತು.

ಕನಕದಾಸರಿಗೆ ದೊರೆತ ಜೀವನ ಅನುಭವ ತುಂಬಾ ದೊಡ್ಡದು. ಹೆಚ್ಚುಕಡಿಮೆ ಅವರು ಕಾಲ್ನಡಿಗೆಯಲ್ಲಿಯೇ ಇಡೀದಕ್ಷಿಣ ಭಾರತವನ್ನು ಸುತ್ತಿದರು. ಅಲ್ಲಿನ ವಿವಿಧ ಜನಾಂಗಗಳನ್ನು ನೋಡಿದರು. ಬಡವರು ಮತ್ತು ಶ್ರೀಮಂತರ ನಡುವಿನ ತಾರತಮ್ಯವನ್ನು ಗಮನಿಸಿದರು. ಅದರ ಹಿನ್ನೆಲೆಯಲ್ಲಿ 'ರಾಮಧಾನ್ಯಚರಿತ್ರೆ' ಎನ್ನುವ ಕಾವ್ಯವನ್ನು ರಚಿಸಿದರು. ಪ್ರಾಯಶಃ

**ಕನಕದಾಸರಿಗೆ ದೊರೆತ ಜೀವನ ಅನುಭವ ತುಂಬಾ ದೊಡ್ಡದು. ಹೆಚ್ಚುಕಡಿಮೆ ಅವರು ಕಾಲ್ನಡಿಗೆಯಲ್ಲಿಯೇ ಇಡೀದಕ್ಷಿಣ ಭಾರತವನ್ನು ಸುತ್ತಿದರು. ಅಲ್ಲಿನ ವಿವಿಧ ಜನಾಂಗಗಳನ್ನು ನೋಡಿದರು. ಬಡವರು ಮತ್ತು ಶ್ರೀಮಂತರ ನಡುವಿನ ತಾರತಮ್ಯವನ್ನು ಗಮನಿಸಿದರು. ಅದರ ಹಿನ್ನೆಲೆಯಲ್ಲಿ 'ರಾಮಧಾನ್ಯಚರಿತ್ರೆ' ಎನ್ನುವ ಕಾವ್ಯವನ್ನು ರಚಿಸಿದರು.**

ಭಾರತದಲ್ಲಿ ಕನಕದಾಸರು ಮೊದಲ ಬಂಡಾಯ ಸಾಹಿತಿಗಳಾಗಿದ್ದಿರಬೇಕು. ಅವರು ವ್ಯವಸ್ಥೆಯ ವಿರುದ್ಧ ಹೋರಾಡಿದರು.

ಕನಕದಾಸರು ಆ ಕಾಲದಲ್ಲಿಯೇ ಕುಲವನ್ನು ಕುರಿತು ಹೀಯಾಳಿಸುತ್ತಿದ್ದ ಜನಾಂಗವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಕನಕದಾಸರ ಎಲ್ಲಾ ಕೀರ್ತನೆಗಳಲ್ಲಿ ಅವರ ವ್ಯಕ್ತಿತ್ವವನ್ನು ನೋಡಬಹುದು. ಕನಕದಾಸರು ಜನಸಾಮಾನ್ಯರ ತಲ್ಲಣಗಳನ್ನು ಗುರುತಿಸಿದರು. ಅವರಿಗೆ ನೈತಿಕ ಧೈರ್ಯವನ್ನು ತುಂಬಿದರು. ಮಹಾನ್ ಶಕ್ತಿಯನ್ನು ನಂಬಿದರೆ ಖಂಡಿತ ಈ ಕಷ್ಟಗಳಿಂದ ಪಾರಾಗಬಹುದು ಎನ್ನುವುದನ್ನು ಅವರು ಬಿಡಿಸಿ ಬಿಡಿಸಿ ಹೇಳುತ್ತಾರೆ.

ಕನಕದಾಸರು ಆ ಕಾಲದಲ್ಲಿ ಕೆಳವರ್ಗದ ಜನಾಂಗವನ್ನು ಒಂದುಗೂಡಿಸಿದ್ದರಿಂದ ಹಿಂದೂಮತವು ಏಕತೆಯನ್ನು ಪಡೆಯಲು ಸಾಧ್ಯವಾಯಿತು. ನಮ್ಮ ಉತ್ತರಕರ್ನಾಟಕದ ಭಾಗದಲ್ಲಿ ಹೈದರಾಬಾದ್‌ಕರ್ನಾಟಕ ಮತ್ತು ಹಳೇ ಮೈಸೂರು ಭಾಗದಲ್ಲಿ ನಡೆದಷ್ಟು ಮತಾಂತರ ನಡೆದಿಲ್ಲ. ಅದಕ್ಕೆ ಕನಕದಾಸರಂತಹ ಅವಧೂತರು ಕಾರಣ. ಅವರು ಜನಸಾಮಾನ್ಯರ ಮಧ್ಯೆ ಬೆಳೆದವರು. ಅವರ ಕಷ್ಟ ಸುಖಗಳನ್ನು ತಿಳಿದವರು. ಜನಸಾಮಾನ್ಯರು ಬಡತನ, ಅನಾರೋಗ್ಯ ಹಾಗೂ ಇತರ ಸಮಸ್ಯೆಗಳಲ್ಲಿ ಬಳಲುತ್ತಿದ್ದಾಗ ಕನಕದಾಸರು ತಮ್ಮ ವ್ಯಕ್ತಿತ್ವದಿಂದ ಅವರಲ್ಲಿ ಧೈರ್ಯ ತುಂಬಿದವರು. ಈ ಪರಂಪರೆ ಸಿದ್ಧಾರೂಢರ ತನಕ ಮುಂದುವರಿದುಕೊಂಡು ಬಂದಿತು. ಅನೇಕ ಶರಣರು ಮತ್ತು ಹರಿದಾಸರು ಈ ಸಂಸ್ಕೃತಿಯನ್ನು ರಕ್ಷಿಸುವಲ್ಲಿ ಎಲೆಮರೆಯಕಾಯಿಯಂತೆ ಮಾಡಿರುವ ಕೆಲಸವನ್ನು ನಾವು ಮರೆತುಬಿಟ್ಟಿದ್ದೇವೆ. ಅದನ್ನು ನಾವು ನೆನಪಿಸಿಕೊಳ್ಳಬೇಕು.

ಕನಕದಾಸರು ಶ್ರೇಷ್ಠ ಕವಿಗಳು ಎಂಬುದಕ್ಕೆ ಅವರ 'ನಳಚರಿತ್ರೆ' ಕಾವ್ಯ ಸಾಕ್ಷಿಯಾಗಿದೆ. ಕನಕದಾಸರ ಕೀರ್ತನೆಗಳಲ್ಲಿ ಅವರಿಗಿರುವ ಅಪಾರವಾದ ಪಾಂಡಿತ್ಯವನ್ನು ಗಮನಿಸಬಹುದು. ರಾಮಾಯಣ, ಮಹಾಭಾರತ, ಹರಿವಂಶ, ಭಾಗವತ, ಉಪನಿಷತ್ತು ಹಾಗೂ ವೇದಾಂತಗಳನ್ನು ತಮ್ಮ ಕೀರ್ತನೆಯಲ್ಲಿ ಅತ್ಯಂತ ಮನೋಹರವಾಗಿ ಅವರು ತರುತ್ತಾರೆ. ಶ್ರೀಸಾಮಾನ್ಯರ ಜ್ಞಾನವನ್ನು ಹೆಚ್ಚಿಸುವಲ್ಲಿ ಅವರ ಕೊಡುಗೆ ಗಣನೀಯವಾಗಿದೆ.

ಕನಕದಾಸರನ್ನು ತಮ್ಮ ಜನಾಂಗದ ಸಾಂಸ್ಕೃತಿಕ ನಾಯಕರನ್ನಾಗಿ ಪಡೆದಿರುವ ಕುರುಬ ಸಮಾಜ ಜಡನಿದ್ರೆಯಿಂದ ಎಚ್ಚೆತ್ತುಕೊಳ್ಳಬೇಕಾಗಿದೆ. ಈ ಸಮಾಜದ ಅನೇಕ ಸಮಸ್ಯೆಗಳನ್ನು ಯುವಜನಾಂಗ ಕೈಗೆತ್ತಿಕೊಳ್ಳಬೇಕಾಗಿದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದ ಈ ಸಮಾಜವು ಇಂದು ಎಂಥ ಸ್ಥಿತಿಯಲ್ಲಿದೆ ಎಂಬುದನ್ನು ಗಮನಿಸಿ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಮ್ಮಲ್ಲಿ ಆರ್ಥಿಕವಾಗಿ ಹೆಚ್ಚು ಮುಂದುವರಿದ ಜನರಿಲ್ಲ. ಹಿರಿಯ ಅಧಿಕಾರಿಗಳ ಪಡೆಯಿಲ್ಲ. ಪ್ರಭಾವಶಾಲಿಯಾದ ಧಾರ್ಮಿಕ ಪೀಠವಿಲ್ಲ. ವಿವಿಧ ರಾಜಕೀಯ ಪಕ್ಷಗಳಲ್ಲಿ ತಮ್ಮ ಸಮುದಾಯಕ್ಕೆ ನ್ಯಾಯಕೊಡಿಸುವ ಪ್ರಭಾವಶಾಲಿ ನಾಯಕರಿಲ್ಲ.

ನಮ್ಮನ್ನು ಮುನ್ನಡೆಸುವಯುವ ನಾಯಕರನ್ನು ನಾವು ಗುರುತಿಸಬೇಕಾಗಿದೆ. ಈ ಸಮಾಜದ ಯುವಶಕ್ತಿ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಬೇಕಾಗಿದೆ. ಈ ಸಮಾಜಕ್ಕೆ ಉದ್ಯಮಶೀಲತೆ ಮತ್ತು ಕ್ರಿಯಾಶೀಲತೆ ಅತ್ಯಂತಅಗತ್ಯವಾದ ಗುಣಗಳಾಗಿವೆ.

ಕನಕದಾಸರನ್ನು ನಾವು ಮತ್ತಷ್ಟು ವಿಶಾಲವಾದ ಹಿನ್ನೆಲೆಯಲ್ಲಿ ನೋಡಬೇಕು. ಅವರುಎಲ್ಲ ಶೋಷಿತ ಸಮಾಜದ ನಾಯಕರಾಗಿದ್ದಾರೆ. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಎಲ್ಲ ಸಮಾಜಗಳು ಬೆಳೆಯಬೇಕು ಎಂಬ ಆಶಯವನ್ನು ಅವರು ಹೊಂದಿದ್ದರು. ಕನಕದಾಸರು ನಿಜವಾದ ಅರ್ಥದಲ್ಲಿ ವಿಶ್ವಮಾನವರು. ಅವರು ದೈವಾಂಶ ಸಂಭೂತರು.

'ಈಗ್ಗೆ ಆರು ನೂರು ವರ್ಷಗಳ ಹಿಂದೆ ಕುರುಬ ಸಮಾಜದಒಬ್ಬ ವ್ಯಕ್ತಿ ಬಲಿಷ್ಠ ಸಾಂಪ್ರದಾಯಿಕ ಜನಾಂಗದ ನಡುವೆ ತನ್ನ ಪ್ರತಿಭೆಯನ್ನು ತೋರಿಸಿ ಬೆಳೆಯಬೇಕಾದರೆ ಆತನಲ್ಲಿ ಎಂಥ 'ಇಚ್ಛಾಶಕ್ತಿ ಮತ್ತು ಆತ್ಮವಿಶ್ವಾಸ ಇದ್ದಿರಬೇಕೆಂಬುದನ್ನು ನೀವೇ ಊಹಿಸಿ.

**(ದಿನಾಂಕ 18.11.2024 ರಂದುತುಮಕೂರಿನ ಗುಬ್ಬಿ ವೀರಣ್ಣ ಕಲಾಮಂದಿರದಲ್ಲಿ ತುಮಕೂರು ಜಿಲ್ಲಾಡಳಿತ ಮತ್ತು ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಸಂತಕನಕದಾಸರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಶ್ರೀದೇವಿ ವಿದ್ಯಾಸಂಸ್ಥೆ ಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಮಾಡಿದ ಭಾಷಣದ ಸಾರಾಂಶ).**

## ವಿಜ್ಞಾನಕ್ಕಾಗಿ ಪ್ರತಿಭೆಯ ಅನ್ವೇಷಣೆ

ಗುಣಮಟ್ಟದ ಮತ್ತು ಇಂದಿನ ಕೈಗಾರಿಕೆಗಳ ಅಗತ್ಯ ಪೂರೈಸುವ ಶಿಕ್ಷಣವನ್ನು ನೀಡುವ ಮತ್ತು ವಿದ್ಯಾರ್ಥಿಗಳಲ್ಲಿ ಕೌಶಲವನ್ನು ಬೆಳೆಸುವ ಉದ್ದೇಶದಿಂದ ಶ್ರೀದೇವಿ ಶಿಕ್ಷಣ ಸಂಸ್ಥೆ ಕಳೆದ 2022ರಿಂದ ದ್ವಿತೀಯ ಪಿಯುಸಿ ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗಾಗಿ ಪ್ರತಿ ವರ್ಷ 'ಅನ್ವೇಷಣೆ' ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಪ್ರತಿ ವರ್ಷವೂ ಒಂದೊಂದು ಥೀಮ್ ಇಟ್ಟುಕೊಂಡು ವಿದ್ಯಾರ್ಥಿಗಳಲ್ಲಿ ಪ್ರತಿಭಾನ್ವೇಷಣೆ ಮಾಡಲಾಗುತ್ತಿದೆ. "ಸಮಾಜಕ್ಕಾಗಿ ತಂತ್ರಜ್ಞಾನ" ಎಂಬುದು ಈ ವರ್ಷದ ಘೋಷವಾಕ್ಯವಾಗಿದೆ. ಇದರಲ್ಲಿ ಚಿಕ್ಕಮಗಳೂರು, ಹಾಸನ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಿಂದ ನಾನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ಎಂದು ಕಾರ್ಯಕ್ರಮದ ಮುಖ್ಯ ಸಂಯೋಜಕ ಹಾಗೂ ಎಂ.ಬಿ.ಎ. ವಿಭಾಗದ ಪ್ರೊ. ಪ್ರವೀಣ್‌ಕುಮಾರ್ ತಿಳಿಸಿದರು. ಮೂರು ವಿಭಾಗದಲ್ಲಿ ಬಹುಮಾನ ವಿಜೇತರಾದ ವಿದ್ಯಾರ್ಥಿಗಳ ವಿವರವನ್ನೂ ಅವರು ನೀಡಿದರು.




### ಕ್ವಿಜ್ ವಿಭಾಗ

**1. ಕೆ.ಎನ್. ಪೂಜಿತ ಮತ್ತು ಪಿ. ನಿಶಾ.** ವಿದ್ಯಾವಾಹಿನಿ ಕಾಲೇಜು, ತುಮಕೂರು, ಮೊದಲ ಬಹುಮಾನ,

**2. ಎಲ್ ಎಂ. ಹರ್ಷಿತ ಮತ್ತು ಬಿ. ಎಂ ಗಗನ,** ಭಾರತಿ ಮಹೇಶ್ ಪಿಯು ಕಾಲೇಜು ತುಮಕೂರು, ಎರಡನೆಯ ಬಹುಮಾನ

**3. ಆರ್. ಬಿ. ಗಗನ ಮತ್ತು ಎ.ಜಿ. ಜನನ್ಯ,** ವರಿನ್ ಪಿಯು ಕಾಲೇಜು. ತುಮಕೂರು, ಮೂರನೆಯ ಬಹುಮಾನ

**4. ಕೆ. ಎಲ್. ಸಿಂಚನ ಮತ್ತು ಹೆಚ್.ಕೆ. ನಮಿತಾ ವಿ.ಆರ್.** ಮಾರುತಿ ಪಿಯು ಕಾಲೇಜು. ತುಮಕೂರು, ಸಮಾಧಾನಕರ ಬಹುಮಾನ

### ಮಾಡೆಲ್ ಪ್ರೆಸೆಂಟೇಷನ್

**1. ಎಂ. ಸಿದ್ದೇಶ್ ಮತ್ತು ಎಸ್ ನಿಖಿಲ್,** ಸರ್ವೋದಯ, ಪಿಯು ಕಾಲೇಜು, ತುಮಕೂರು

**2. ಎಂ. ಕೆಪ್ರಜ್ವಲ ಮತ್ತು ಎಂ. ಧನುಷ್,** ವರಿನ್ ಪಿಯು ಕಾಲೇಜು, ತುಮಕೂರು.

**3. ಚೈತ್ರ ಮತ್ತು ಅನ್ನಪೂರ್ಣ,** ರೇಣುಕಾ ವಿದ್ಯಾಪೀಠ ತುಮಕೂರು.

**4. ಎನ್. ರಜನಿ ಮತ್ತು ಅನ್ನಪೂರ್ಣ,** ಭಾರತಿ ಮಹೇಶ್ ಪಿಯು ಕಾಲೇಜು, ತುಮಕೂರು

### ಸಮಾಧಾನಕರ ಬಹುಮಾನ

**1. ಅಶ್ವಿನಿ ಮತ್ತು ಹರ್ಷಿತ್,** ವರಿನ್ ಪಿಯು ಕಾಲೇಜು ತುಮಕೂರು,

**2. ಬಿ.ಎಸ್ ಸಂಜಯ್. ಮತ್ತು ಸಿ.ಆರ್. ಶಶಾಂಕ್,** ರೇಣುಕಾ ವಿದ್ಯಾಪೀಠ ತುಮಕೂರು.

### ಪೋಸ್ಟರ್ ಪ್ರೆಸೆಂಟೇಷನ್ ವಿಭಾಗ

**1. ಸಿ.ಅಮೂಲ್ಯ ಮತ್ತು ಜೆ.ತ್ರಿಶಾ,** ಸರ್ಕಾರಿ ಪಿಯು ಕಾಲೇಜು, ತುರುವೇಕೆರೆ.

**2. ಮೌನ ಮತ್ತು ಎಂ ಮೀನಾ,** ಜೈನ್ ಪಿಯು ಕಾಲೇಜು,ತುಮಕೂರು.

**3. ಎನ್. ಲೋಹಿತ್ ಮತ್ತು ಕುಶಲ್ ಆರಾಧ್ಯ,** ವಿನಯ ಪಿಯು ಕಾಲೇಜು, ನಿಟ್ಟೂರು.

**4. ಡಿ.ಟಿ. ತನುಶ್ರೀ ಮತ್ತು ಹರ್ಷಿತ,** ಸರ್ಕಾರಿ ಜೂನಿಯರ್ ಕಾಲೇಜು, ಕಡೂರು

### ಸಮಾಧಾನಕರ ಬಹುಮಾನ

**1. ಜೆ. ರೋನಿ ಮತ್ತು ನೋಹನ್ ಪಾಲ್,** ಬಿಷಪ್ ಸಾರ್ಜೆಂಟ್ ಪಿಯು ಕಾಲೇಜು, ತುಮಕೂರು,

**2. ಭಾವನಾ ಮತ್ತು ಷಿರೀಷ,** ವರಿನ್‌ಕಾಲೇಜು, ತುಮಕೂರು.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**